بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ
# WEEKLY BADAR QADIAN KANNADA

ವರ್ಷ: 03

ಸಂಚಿಕೆ: 49

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

08 ಡಿಸೆಂಬರ್ 2022, 08 ಫತಹ್ 1401 ಹಿಜರಿ ಶಮ್‌ಸಿ,
13 ಜಮಾದಿ ಉಲ್ ಅವ್ವಲ್ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاِمَّا يَنْزَغَنَّكَ مِنَ الشَّيْطٰنِ
نَزْغٌ فَاسْتَعِذْ بِاللّٰهِ ؕ
اِنَّهٗ سَمِيْعٌ عَلِيْمٌ ۝

**(ಅಲ್ ಅಅ್‌ರಾಫ್ : 201)**

ಅಂದರೆ: ಶೈತಾನನಿಂದ ನಿನಗೇನಾದರೂ ಪ್ರಚೋದನೆಯುಂಟಾದರೆ ನೀನು ಅಲ್ಲಾಹನ ಅಭಯಯಾಚನೆ ಮಾಡು. ಖಂಡಿತವಾಗಿಯೂ ಅವನು ಎಲ್ಲವನ್ನು ಕೇಳುವವನೂ ತಿಳಿಯುವವನೂ ಆಗಿದ್ದಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಸಾಲ ತೀರಿಸಲು ವಕಾಲತ್ತು

(2306) ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ ಒಬ್ಬ ವ್ಯಕ್ತಿ ರಸೂಲುಲ್ಲಾಹ್(ಸ) ಅವರ ಬಳಿಗೆ ಬಂದು ಉಚ್ಚಸ್ವರದಲ್ಲಿ ಸಾಲವನ್ನು ಕೇಳಿದನು. ರಸೂಲುಲ್ಲಾಹ್(ಸ)ರವರ ಸಹಾಬರು ಅವನನ್ನು ಹೊಡೆಯಲು ಹೋದರು. ರಸೂಲುಲ್ಲಾಹ್(ಸ) ಹೇಳಿದರು: ಅವನನ್ನು ಬಿಡಿ, ಏಕೆಂದರೆ ಹಕ್ಕು ಹೊಂದಿರುವವನು ಅಂತಹ ಮಾತುಗಳನ್ನು ಹೇಳುತ್ತಾನೆ. ಅವನ ಒಂಟೆಗೆ ಇದ್ದಷ್ಟೇ ವಯಸ್ಸಿನ ಒಂಟೆಯನ್ನು ಅವನಿಗೆ ನೀಡಿ. ಸಹಾಬರವರು ಹೇಳಿದರು: ಯಾ ರಸೂಲಲ್ಲಾಹ್!! ಅದಕ್ಕಿಂತ ಉತ್ತಮವಾಗಿರುವುದೇ ಸಿಗುತ್ತಿದೆ. ಅದಕ್ಕೆ ರೂಲುಲ್ಲಾಹ್(ಸ) ನುಡಿದರು: ಅದನ್ನೆ ಅವನಿಗೆ ನೀಡಿ. ಏಕೆಂದರೆ ನಿಮ್ಮಲ್ಲಿ ಉತ್ತಮರು ತಮ್ಮ ಸಾಲವನ್ನು ಉತ್ತಮವಾಗಿ ಪಾವತಿಸುವವರೇ.

**(ವ್ಯಾಖ್ಯಾನ)** ಹಝ್‌ರತ್ ಝೈನುಲ್ ಆಬಿದೀನ್ ವಲಿಯುಲ್ಲಾ ಷಾ ಅವರು ಹೇಳುತ್ತಾರೆ: ಈ ಹದೀಸ್‌ನಿಂದ ಹೊಸ ಸಮಸ್ಯೆಯನ್ನು ಆಯ್ಕೆ ಮಾಡಲಾಗಿದೆ ಅಂದರೆ ಸಾಲವನ್ನು ವಿಳಂಬವಿಲ್ಲದೆ ಪಾವತಿಸಬೇಕಾದರೆ, ಅದಕ್ಕೆ ವಕೀಲರ ಅಗತ್ಯವೇನು? ಏಕೆಂದರೆ ವಕೀಲರನ್ನು ನೇಮಿಸುವ ಸಂದರ್ಭದಲ್ಲಿ ಪಾವತಿಯಲ್ಲಿ ಮತ್ತಷ್ಟು ವಿಳಂಬವಾಗುತ್ತದೆ. ಇಬ್ನ್ ಮುನೀರ್(ರಹ) ಅವರ ಅಭಿಪ್ರಾಯದಲ್ಲಿ, ಅಂತಹ ವಿಳಂಬವು ಕ್ಷಮಿಸಲಾಗದು, ಮತ್ತು ಪ್ರವಾದಿ(ಸ) ಅವರ ಒಂದು ಹೇಳಿಕೆ **ಮತ್ಲುಲ್ ಗನಿಯ್ಯಿ ಝುಲುಮುನ್** (ಅಂದರೆ ಶ್ರೀಮಂತರು ಸಾಲ ಪಾವತಿಸುವುದರಲ್ಲಿ ವಿಳಂಬಗೊಳಿಸುವುದು ಅನ್ಯಾಯವಾಗಿದೆ, ವರದಿ ಸಂಖ್ಯೆ-2287) ಎಂಬುದು ಸೂಕ್ತವಲ್ಲ, ಏಕೆಂದರೆ ಕೆಲವು ಸಂದರ್ಭಗಳಲ್ಲಿ ವಕೀಲರನ್ನು ಹೊಂದುವುದು ಅನಿವಾರ್ಯವಾಗಿದೆ. **(ಫತ್ ಅಲ್-ಬಾರಿ, ಭಾಗ-4, ಪುಟ-609) (ಬುಖಾರಿ, ಸಂಪುಟ-4, ಕಿತಾಬ್ ಅಲ್-ವಕಲಾಹ್, 2008 ಖಾದಿಯಾನ್ ಪ್ರಕಟಿತ)**

## ಧರ್ಮದ ಸಲುವಾಗಿ ಕೇಂದ್ರಕ್ಕೆ ಬರಬೇಕು ಮತ್ತು ಪರಲೋಕದ ಸುಧಾರಣೆಯ ಯೋಚನೆಯೊಂದಿಗೆ ಇಲ್ಲಿಯೇ ಇರಬೇಕು

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಕೇಂದ್ರದಲ್ಲಿ ವಾಸಿಸುವ ಉದ್ದೇಶವು ಧರ್ಮವಾಗಿರಬೇಕು

ಒಮ್ಮೆ ಸ್ನೇಹಿತರೊಬ್ಬರು ತಾನು ವ್ಯಾಪಾರಕ್ಕಾಗಿ ಖಾದಿಯಾನ್‌ಗೆ ಬರಲು ಬಯಸುತ್ತೇನೆ ಎಂದು ಹೇಳಿದರು. ಅದಕ್ಕೆ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: "ಇದು ಕೆಟ್ಟ ಉದ್ದೇಶವಾಗಿದೆ, ಇದಕ್ಕೆ ಪಶ್ಚಾತ್ತಾಪ ಪಡಬೇಕು, ಒಬ್ಬರು ಧರ್ಮದ ಸಲುವಾಗಿ ಇಲ್ಲಿಗೆ ಬರಬೇಕು ಮತ್ತು ಪರಲೋಕದ ಸುಧಾರಣೆಯ ಯೋಚನೆಯೊಂದಿಗೆ ಇಲ್ಲಿ ಇರಬೇಕು. ಈ ಉದ್ದೇಶವೇ ಆಗಿದ್ದರೆ ಇಲ್ಲಿ ತಂಗುವ ಉದ್ದೇಶ ಈಡೇರಲು ವ್ಯಾಪಾರ ಇತ್ಯಾದಿಗಳಿದ್ದರೆ ತೊಂದರೆಯಿಲ್ಲ. ಪ್ರಮುಖ ಉದ್ದೇಶ ಧರ್ಮವಾಗಬೇಕೇ ಹೊರತು ಲೌಕಿಕತೆಯಲ್ಲ. ನಗರ ವ್ಯಾಪಾರಕ್ಕೆ ಸೂಕ್ತವಾಗಿದೆ. ಇಲ್ಲಿ ಬರುವ ಮೂಲ ಉದ್ದೇಶ ಯಾವತ್ತೂ ಧರ್ಮದ ಹೊರತಾಗಿ ಇರಕೂಡದು. ತದನಂತರ ನೀವು ಏನೇ ಪಡೆದರು ಅದನ್ನು ಅಲ್ಲಾಹನ ಅನುಗ್ರಹ ಎಂದು ಪರಿಗಣಿಸಬೇಕು.

### ಸೃಷ್ಠಿಯೊಂದಿಗೆ ಸಹಾನುಭೂತಿ

ಯಾರಾದರೂ ನೋವು ಅನುಭವಿಸಿದರೆ ಮತ್ತು ನಾನು ಆ ಸಂದರ್ಭದಲ್ಲಿ ನಮಾಝಿನಲ್ಲಿ ತೊಡಗಿದ್ದರೆ. ಅವರ ಧ್ವನಿ ನನ್ನ ಕಿವಿಗೆ ಬಿದ್ದರೆ, ನಾನು ನಮಾಝನ್ನು ಮುರಿಯುವ ಮೂಲಕ ಅವರಿಗೆ ಸಹಾಯ ನೀಡಬೇಕೆಂದು ಬಯಸುತ್ತೇನೆ ಮತ್ತು ಅವರೊಂದಿಗೆ ಸಾಧ್ಯವಾದಷ್ಟು ಸಹಾನುಭೂತಿ ಹೊಂದಿರುತ್ತೇನೆ. ತನ್ನ ಸಹೋದರನ ದುಃಖ ಮತ್ತು ಸಂಕಟದಲ್ಲಿ ಅವನನ್ನು ಬೆಂಬಲಿಸದಿದ್ದರೆ ಇದು ನೈತಿಕತೆಗೆ ವಿರುದ್ಧವಾಗಿದೆ. ನೀವು ಅವನಿಗಾಗಿ ಏನನ್ನೂ ಮಾಡಲು ಸಾಧ್ಯವಾಗದಿದ್ದರೆ, ಕನಿಷ್ಠಪಕ್ಷ ಅವನಿಗಾಗಿ ದುಆ ಮಾಡಿ.

ನಮ್ಮವರಿಗೆ ಮಾತ್ರವಲ್ಲ, ನಾನು ಹೇಳುವುದೇನೆಂದರೆ ಅನ್ಯರೊಂದಿಗೆ ಮತ್ತು ಹಿಂದೂಗಳೊಂದಿಗೆಯೂ ಸಹ ಇಂತಹ ನೈತಿಕತೆಯ ಉದಾಹರಣೆಯನ್ನು ತೋರಿಸಿ ಮತ್ತು ಅವರ ಬಗ್ಗೆ ಸಹಾನುಭೂತಿ ತೋರಿಸಿ.

ಒಮ್ಮೆ ನಾನು ವಾಯುವಿಹಾರಕ್ಕೆ ಹೋಗುತ್ತಿದ್ದಾಗ ಒಬ್ಬ ಪಟ್ವಾರಿ ಅಬ್ದುಲ್ ಕರೀಂ ನನ್ನ ಜೊತೆಗಿದ್ದನು. ಅವನು ಸ್ವಲ್ಪ ಮುಂದೆ ಮತ್ತು ನಾನು ಹಿಂದೆ ಇದ್ದೆ. ದಾರಿಯಲ್ಲಿ ನಮಗೆ 70 ಅಥವಾ 75 ವರ್ಷ ವಯಸ್ಸಿನ ಒಬ್ಬ ಮುದುಕಿಯ ಪರಿಚಯವಾಯಿತು. ಅವರು ಒಂದು ಪತ್ರವನ್ನು ನೀಡಿ ಓದಲು ಅವನಿಗೆ ಹೇಳಿದರು, ಆದರೆ ಅವನು ಅವರನ್ನು ಗದರಿಸಿ ದೂರಸರಿಸಿದನು. ನನ್ನ ಮನಸ್ಸಿಗೆ ನೋವುಂಟಾಯಿತು. ಅವರು ನನಗೆ ಆ ಪತ್ರವನ್ನು ನೀಡಿದಳು, ನಾನು ಅದನ್ನು ತೆಗೆದುಕೊಂಡು ಓದಿ ಅದನ್ನು ಚೆನ್ನಾಗಿ ವಿವರಿಸಿದೆ. ಅವನಿಗೆ ಇದನ್ನು ನೋಡಿ ಬಹಳ ನಾಚಿಕೆಯಾಯಿತು, ಏಕೆಂದರೆ ಅವನು ಅಲ್ಲಿಯೇ ಉಳಿಯಬೇಕಾಯಿತು ಮತ್ತು ಪ್ರತಿಫಲದಿಂದಲೂ ವಂಚಿತನಾದನು.

### ಜಮಾಅತ್‌ನ ಭವಿಷ್ಯದ ಬಗ್ಗೆ ಒಂದು ದೈವದರ್ಶನ

"ಅರಸರು ಈ ಸರಪಳಿಯನ್ನು ಪ್ರವೇಶಿಸುತ್ತಾರೆ ಎಂದು ನಾನು ಮಹಾನ್ ದೈವದರ್ಶನದಿಂದ ತಿಳಿದುಕೊಂಡಿದ್ದೇನೆ. ಆ ಅರಸರನ್ನು ಸಹ ನನಗೆ ತೋರಿಸಲಾಗಿದೆ. ಅವರು ಕುದುರೆ ಸವಾರಿ ಮಾಡುತ್ತಿದ್ದರು ಮತ್ತು ಸರ್ವಶಕ್ತನಾದ ಅಲ್ಲಾಹನು ನಾನು ನಿಮ್ಮನ್ನು ಎಲ್ಲಿಯವರೆಗೆ ಅನುಗ್ರಹಿಸುತ್ತೇನೆ ಎಂದರೆ ಅರಸರು ನಿಮ್ಮ ಬಟ್ಟೆಗಳಲ್ಲಿ ಅನುಗ್ರಹಗಳನ್ನು ಹುಡುಕುತ್ತಾರೆ ಎಂದೂ ನುಡಿದಿದ್ದಾನೆ.

ಸರ್ವಶಕ್ತನಾದ ಅಲ್ಲಾಹನು ಒಂದು ಕಾಲದ ನಂತರ ನಮ್ಮ ಜಮಾಅತ್ತಿನಲ್ಲಿ ಇಂತಹ ಜನರು ಪ್ರವೇಶಿಸುತ್ತಾರೆ ಮತ್ತು ಅವರ ನಂತರ ಅವರೊಂದಿಗೆ ಒಂದು ಜಗತ್ತು ಅದರ ಕಡೆಗೆ ತಿರುಗುತ್ತದೆ.

**(ಮಲ್‌ಫೂಝಾತ್, ಸಂಪುಟ-1, ಪುಟ-415, ಮುದ್ರಿತ ಖಾದಿಯಾನ್ 2018)**

### *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.** **(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

# ಜಲ್ಸ ಸಾಲಾನದ ಭಾಗವಹಿಸುವಿಕೆಗೆ ಮಹತ್ವ ನೀಡಿ

**ಇಲ್ಲಿ ನಡೆಯುವಂತಹ ಎಲ್ಲಾ ಕಾರ್ಯಗಳು ದೇವ ಸಮ್ಮತಿ ಹೊಂದಿವೆ ಮತ್ತು ಇಸ್ಲಾಮಿನ ಮಹೋನ್ನತ ಸ್ಥಾನವನನು ಪ್ರದರ್ಶಿಸುವುದಾಗಿದೆ. ಈ ಸಂಘಟನೆಯ ಬುನಾದಿಯು ಅಲ್ಲಾಹನು ಸ್ವತಃ ತನ್ನ ಕೈಯಿಂದ ಇಟ್ಟಿರುವನು.**

ಹಿಂದಿನ ಸಂಚಿಕೆಯಲ್ಲಿ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅಧ್ಯಾಪನೆಗಳ ಪ್ರಕಾಶದಲ್ಲಿ ಜಲ್ಸ ಸಾಲಾನದ ಪ್ರಾಮುಖ್ಯತೆ ಕುರಿತು ವಿವರಿಸಿದ್ದರು. ಈ ಸಂಚಿಕೆಯಲ್ಲಿ ಸಹ ನಾವು ಖಾದಿಯಾನ್ ದಾರುಲ್ ಅಮೂನ್‌ನ ದರ್ಶನ ಹಾಗೂ ಜಲ್ಸ ಸಾಲಾನದಲ್ಲಿ ಭಾಗವಹಿಸುವಿಕೆಯ ಪ್ರಾಮುಖ್ಯತೆ ಹಾಗೂ ಅನುಗ್ರಹಗಳ ಕುರಿತು ಹಝ್ರತ್ ಮುಸ್ಲಿಹ್ ಮೌಊದ್ ಅಲೈಹಿಸ್ಸಲಾಮ್ ರವರು ಅಧ್ಯಾಪನೆಗಳಿಂದ ಕೆಲವು ವಿಚಾರಗಳನ್ನು ಪ್ರಸ್ತುತಪಡಿಸುವೆವು.

**ಯಾರು ಖುದ್ದಾಗಿ ಆಗಮಿಸುವುದಿಲ್ಲ ಅಥವಾ ಹೆಂಡತಿ ಮಕ್ಕಳನ್ನು ಸಹ ಕರೆತರುವುದಿಲ್ಲ, ಅವರ ಮನೆಗಳಿಂದ ಅಹ್ಮದಿಯತ್ ಅಳಿಸಿಹೋಗುವುದು.**

ಹಝ್ರತ್ ಮುಸ್ಲಿಹ್ ಮೌಊದ್(ರ) ಜಲ್ಸ ಸಾಲಾನದಲ್ಲಿ ಭಾಗವಹಿಸುವ ಅನಿವಾರ್ಯತೆ ಮತ್ತು ಅನುಗ್ರಹಗಳ ಬಗ್ಗೆ ಬೆಳಕು ಚೆಲ್ಲುತ್ತಾ ಹೇಳುತ್ತಾರೆ.

"ಯಾರಿಗೆ ಜಲ್ಸಾದಲ್ಲಿ ಬಾಗವಹಿಸುವ ಸಾಧ್ಯತೆಯಿದ್ದರೂ ಭಾಗವಹಿಸಲು ಹಿಂಜರಿಯುತ್ತಾರೋ ಅವರು ತಮ್ಮ ಮತ್ತು ತಮ್ಮ ಹೆಂಡತಿ ಮಕ್ಕಳ ಶತ್ರುಗಳಾಗಿದ್ದಾರೆ. ಏಕೆಂದರೆ ಜಲ್ಸ ಸಾಲಾನಕ್ಕೆ ಬರುವುದರಿಂದ ಮನುಷ್ಯನ ಹೃದಯ ತುಕ್ಕು ಹಿಡಿಯುವುದಿಲ್ಲ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಿದ್ದರು. ಖಾದಿಯಾನಿಗೆ ಪದೇ ಪದೇ ಬರುತ್ತಿರಬೇಕು. ಯಾರಿಗೆ ಪದೇ ಪದೇ ಬರಲು ಸಾಧ್ಯವಿಲ್ಲ. ಅವರು ವರ್ಷಕ್ಕೊಮ್ಮೆ ಆದರೂ ಬರಲು ಪ್ರಯತ್ನಿಸಬೇಕು. ಹೌದು ಕೆಲವು ವಿಶೇಷ ಸಂಧರ್ಭ ಇರುತ್ತವೆ. ಆದರೆ ವಿಶೇಷಗಳು ಸೃಷ್ಟಿಸಿಕೊಂಡರೇ ಅವರು ತಮಗೆ ತಾವೇ ಶತ್ರುವಾದಂತೆ. ಯಾರು ತಾವಾಗಿ ಬರುವುದಿಲ್ಲ ಅಥವಾ ತಮ್ಮ ಹೆಂಡತಿ ಮಕ್ಕಳನ್ನು ಕರೆದುಕೊಂಡು ಬರುವುದಿಲ್ಲ, ಅವರು ತೀರಿಹೋದ ನಂತರ ಅವರ ಮನೆಯಿಂದ ಅಹ್ಮದಿಯತ್ ಅಳಿಸಿ ಹೋಗುತ್ತದೆ. ಕೆಲ ಜನರು ತಮ್ಮ ಜೊತೆಯಲ್ಲಿ ತಮ್ಮ ಅಹ್ಮದಿಯೆತರ ಬಂಧುಗಳನ್ನು ಸಂಬಂಧಿಕರನ್ನು ಕರೆ ತರುತ್ತಾರೆ ಅದರಿಂದ ಅಲ್ಲಾಹನ ಅನುಗ್ರಹದಿಂದ ಹೆಚ್ಚಿನವರಿಗೆ ಬೈಅತ್ ಮಾಡುವ ಭಾಗ್ಯ ದೊರೆಯುತ್ತದೆ. ಆದುದರಿಂದ ಅವರನ್ನು ಕಂಡಿತವಾಗಿಯೂ ಕರೆತರಬೇಕು. (ಖುತುಬ ಜುಮುಅ 25 ನವೆಂಬರ್ 1932, ಖುತ್ಬಾತೆ ಮಹ್ಮೂದ್ ಸಂಪುಟ–13, ಪುಟ–632)

**ಯಾರು ಖಾದಿಯಾನಿಗೆ ಪದೆ ಪದೇ ಬರುವುದಿಲ್ಲ ಅವರ ವಿಶ್ವಾಸದದಲ್ಲಿ ದೋಷವಿದೆ.**

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ಖಾದಿಯಾನಿಗೆ ಬರಲು ಪ್ರಯತ್ನಪಡಬೇಕು. ಮತ್ತೆ ಮತ್ತೆ ಬರುತ್ತಿರಬೇಕು. ನಾನು ಹಝ್ರತ್ ಮಸೀಹ್ ಮೌಊದ್(ಅ) ಅವರಿಂದ ಕೇಳಿದ್ದೇನೆ. ಮತ್ತೆ ಮತ್ತೆ ಕೇಳಿದ್ದೇನೆ. ಯಾರು ಮತ್ತೆ ಮತ್ತೆ ಖಾದಿಯಾನಿಗೆ ಬರುವುದಿಲ್ಲ ಅವರ ವಿಶ್ವಾಸದಲ್ಲಿ ದೋಷ ಉಂಟಾಗುವ ಭಯವಿದೆ.

**ಇಲ್ಲಿ ಮಕ್ಕ ಮದೀನ ರೀತಿಯ ಅನುಗ್ರಹಗಳು ಅವತರಿಸುತ್ತವೆ**

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ಖಾದಿಯಾನಿಗೆ ಬರುವುದು ಮನಶುದ್ಧಿಗೂ ಕಾರಣವಾಗುತ್ತದೆ ಮಸೀಹ್ ಮೌಊದ್(ಅ) ಅವರು ಹೇಳಿದಂತೆ, ನನ್ನ ವಿಶ್ವಾಸವಿದೆ, ಮತ್ತದು ಸರಿಯಾಗಿಯೆ ಇದೆ, ಅದರ ಒಂದೊಂದು ಅಕ್ಷರವು ಸತ್ಯವಾಗಿದೆ, ಯಾವ ವ್ಯಕ್ತಿ ಖಾದಿಯಾನಿಗೆ ಬರುವುದಿಲ್ಲ ಅಥವ ಕನಿಷ್ಠಮಟ್ಟ ತನ್ನ ಮನೆ ಬಿಡಲು ಬಯಸುವುದಿಲ್ಲ ಅವನ ವಿಶ್ವಾಸದ ಬಗ್ಗೆ ಭಯವಿದೆ. ಅಬ್ದುಲ್ ಹಕೀಮನ ಕುರಿತು ಅದೇ ಹೇಳುತ್ತಿದ್ದರು. ಅವರು ಖಾದಿಯಾನಿಗೆ ಬರುತ್ತಿರಲಿಲ್ಲ.

ಖಾದಿಯಾನಿನ ಬಗ್ಗೆ ಅಲ್ಲಾಹನು, ಇನ್ನಹು ಏಲ್ ಖರ್‌ಯತ ಎಂದು ಹೇಳಿರುವನು. ಇದು ಅಪ್ಪಟ ಸತ್ಯವಾಗಿದೆ. ಇಲ್ಲಿ ಪವಿತ್ರ ಮಕ್ಕ, ಪವಿತ್ರ ಮದೀನ ರೀತಿಯ ಅನುಗ್ರಹಗಳು ಅವತರಿಸುತ್ತವೆ ಹಝ್ರತ್ ಮಸೀಹ್ ಮೌಊದ್(ಅ) ಅವರು ಹೇಳುತ್ತಿದ್ದರು.

**ಝಮೀನೆ ಖಾದಿಯಾನ್ ಅಬ್ ಮುಹ್ತರಮ್ ಹೈ ಹುಜೂಮೆ ಖಲ್ಕ್ ಸೆ ಅರ್ಝೆ ಹರಮ್ ಹೈ**

ಅಂದರೆ: ಖಾದಿಯಾನ್ ಭೂಮಿಯು ಈಗ ಆದರಣೀಯವಾಗಿದೆ, ಜನಸಂದಣಿಯಿಂದ ಅದು ಕಅಬ ಭೂಮಿಯಾಗಿದೆ.

"ಬಾದಶಾಹ್ (ಅರಸರು) ನಿನ್ನ ವಸ್ತ್ರಗಳಿಂದ ಅನುಗ್ರಹ ಪಡೆಯುವರು ಎಂದು ಅಲ್ಲಾಹನು ವಾಗ್ದಾನ ನೀಡಿರುವಾಗ, ಎಲ್ಲಿ ಮಸೀಹರು ಜನ್ಮ ಪಡೆದರೋ ಯಾವ ಭೂಮಿಯ ಮೇಲೆ ಅವರು ನಡೆದಾಡಿದರೋ ಕೊನೆಗೆ ಎಲ್ಲಿ ಸಮಾಧಿಯಾದರೋ ಅಲ್ಲಿ ಅನುಗ್ರಹಗಳು ಅವತರಿಸದೇ ಇರಲು ಸಾಧ್ಯವೇ? ಅಲ್ಲಾಹನು ಹಝ್ರತ್ ರಸೂಲುಲ್ಲಾಹ್(ಸ) ಅವರಿಗೆ ವಾಗ್ದಾನ ನೀಡಿದ್ದನು. ಮಕ್ಕದಲ್ಲಿ ದಜ್ಜಾಲ್ ಪ್ರವೇಶಿಸಲಾರನು ಎಂದು, ಭೂಮಿಯ ಕಾರಣದಿಂದ ಪ್ರವೇಶಿಸಲಾರನೆ? ಅಲ್ಲ ಬದಲು ಅದು ಹಝ್ರತ್ ರಸೂಲುಲ್ಲಾಹ್(ರ) ರವರು ಅಲ್ಲಿ ಜನ್ಮ ಪಡೆದ ಕಾರಣದಿಂದಾಗಿದೆ.

ನಾನು ನಿಮಗೆ ಸತ್ಯವಾಗಿ ಹೇಳುವೆನು, ಅಲ್ಲಾಹನು ನನಗೆ ಹೇಳಿರುವನು. ಖಾದಿಯಾನಿನ ಭೂಮಿ ಅನುಗ್ರಹಿತಗೊಂಡಿದೆ. ನಾನು ನೋಡಿದೆ. ಅಬ್ದುಸ್ಸಮದ್ ಎಂಬ ಓರ್ವ ವ್ಯಕ್ತಿ ನಿಂತುಕೊಂಡು ಹೇಳುತ್ತಾನೆ.

"ಓ ಖಾದಿಯಾನಿನ ಬಡ ಜಮಾಅತ್ ನಿಮಗೆ ಶುಭವಾಗಲಿ! ನಿಮ್ಮ ಮೇಲೆ ಖಿಲಾಫತ್ತಿನ ಕಾರುಣ್ಯಗಳು ಹಾಗೂ ಅನುಗ್ರಹಗಳು ಅವತರಿಸುತ್ತಿವೆ." ಇದು ಅಪ್ಪಟ ಸತ್ಯವಾಗಿದೆ. ಮಸೀಹ್ ಮೌಊದ್(ಅ) ಅವರ ಪವಿತ್ರ ಸ್ಥಾನ ದರ್ಶನದಿಂದ ಒಂದು ರೋಮಾಂಚನ ಉಂಟಾಗುತ್ತದೆ ಮತ್ತು ದುಆ ಮಾಡಲು ಪ್ರೇರಣೆ ದೊರೆಯುತ್ತದೆ. ಆದುದರಿಂದ ಖಾದಿಯಾನಿಗೆ ಹೆಚ್ಚೆಚ್ಚು ಬರುತ್ತಿರಬೇಕು. (ಮನ್‌ಸಬ್ ಖಿಲಾಫತ್, ಅನ್ವಾರುಲ್ ಉಲೂಮ್, ಸಂಪುಟ–2, ಪುಟ 49–50).

**ಜಲ್ಸ ಸಮಯವಲ್ಲದೆ ಇತರ ಸಮಯದಲ್ಲೂ ಬರಬೇಕು.**

**ಯಾರು ಖಾದಿಯಾನಿನೊಂದಿಗೆ ಸಂಬಂಧ ಹೊಂದುವುದಿಲ್ಲ ಅವನು ಶೃಂಖಲೆಯಿಂದ ತುಂಡರಿಲ್ಪಡುವನು.**

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ನಾವು ಜಲ್ಸ ಸಲಾನದ ವೇಳೆ ಬರುತ್ತೇವೆ. ಅದೇ ಸಾಕಾಗಿದೆ ಎಂದು ನೀವು ಹೇಳುವುದಾದರೆ ಅದು ಸರಿಯಲ್ಲ. ಈ ಸಂದರ್ಭದಲ್ಲಿ ಕೇವಲ ಸಾಮೂಹಿಕವಾಗಿ ಮಾತುಗಳನ್ನು ಹೇಳಲಾಗುತ್ತದೆ ಮತ್ತು ಉಪದೇಶಗಳನ್ನು ನೀಡಲಾಗುತ್ತದೆ. ಆದರೆ ಕಲಿಯಲು ತರಬೇತಿಗೆ ಅದರ ಹೊರತಾದ ಸಮಯದಲ್ಲೇ ಸಾಧ್ಯವಾಗುತ್ತದೆ. ಆದುದರಿಂದ ಜಲ್ಸ ಸಮಯ ಹೊರತಾಗಿಯೂ ಬರಬೇಕು. ಜಲ್ಸ ಸಮಯ ಹೊರತಾಗಿ ಇಲ್ಲಿ ಬರುವ ಮಿತ್ರರು ಬಲ್ಲರು. ತಾಜಾ ಹಾಲಿನಲ್ಲಿ ಮತ್ತು ಡಬ್ಬಿ ಹಾಲಿನಲ್ಲಿ ಏನು ವ್ಯತ್ಯಾಸವಿದೆ ಎಂದು. ಆದುದರಿಂದ ಅವರು ಯಾವ ರಜಾ ಸಮಯವಾಗಲಿ ಅಥವಾ ಬೇರೆ ಸಂದರ್ಭ ಒದಗಿಬರುವುದಾಗಲಿ ಅವಶ್ಯಕವಾಗಿ ಇಲ್ಲಿ ಬರುತ್ತಾರೆ. ಖರ್ಚು ಸಹಿಸಿಕೊಳ್ಳುತ್ತಾರೆ. ಮನೆಯ ಆರಾಮ ಲೆಕ್ಕಿಸುವುದಿಲ್ಲ, ಹೆಂಡತಿ ಮಕ್ಕಳಿಂದ ದೂರವಾಗಿ ಇಲ್ಲಿ ಬರುತ್ತಾರೆ ಮತ್ತು ಅವರಿಗೆ ಪ್ರಯೋಜನವು ಸಿಗುತ್ತದೆ. ಅವರ ಮತ್ತೆ ಮತ್ತೆ ಬರುವಿಕೆಯೇ ಇಲ್ಲಿ ದೊರಕುವ ಪ್ರಯೋಜನವೆಂಬುದಕ್ಕೆ ಸಾಕ್ಷ್ಯವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಪೈಕಿ ಹೆಚ್ಚು ಒತ್ತನ್ನು ನೀಡಿದ್ದಾರೆ. ಮತ್ತು ಹೇಳಿದ್ದಾರೆ. ಯಾರು ಮತ್ತೆ ಮತ್ತೆ ಇಲ್ಲಿ ಬರುವುದಿಲ್ಲ, ಅವರ ವಿಶ್ವಾಸದ ಬಗ್ಗೆ ನನಗೆ ಭಯವಿದೆ. ಹಾಗೆ ಯಾರು ಖಾದಿಯಾನಿನೊಂದಿಗೆ ಸಂಬಂಧ ಹೊಂದುವುದಿಲ್ಲ ಅವನು ಶೃಂಖಲೆಯಿಂದ ತುಂಡರಿಸಲ್ಪಡುವನು. ನೀವು ಅದರಿಂದ ಬಯಪಡುವವರಾಗಿರಿ, ನಿಮ್ಮ ಪೈಕಿ ಯಾರೂ ಸಹ ಶೃಂಖಲೆಯಿಂದ ತುಂಡರಿಸಲ್ಪಡದಿರಲಿ. ಅಂದಹಾಗೆ ಈ ತಾಜಾ ಹಾಲು ಎಲ್ಲಿತನಕ ಇರಲು ಸಾಧ್ಯ. ತಾಯಿಯ ಹಾಲು ಸಹ ಒಂದು ಸಮಯಕ್ಕೆ ಬತ್ತಿಹೋಗುತ್ತದೆ. ಮಕ್ಕ ಮದೀನದವರ ಎದೆಹಾಲು ಬತ್ತಿ ಹೋಗಲಿಲ್ಲವೇ? ಅದೇ ರೀತಿ ಇದಕ್ಕೂ ಒಂದು ಸಮಯ ಬರುವುದು, ಅಲ್ಲಾಹನು ನಮ್ಮ ಸಂತಾನ, ಸಂತಾನದ ಸಂತಾನಗಳಿಗೆ ಸಹ ಅದರಿಂದ ರಕ್ಷಿಸುವಂತಾಗಲಿ, ಈ ಹಾಲು ಬತ್ತಿ ಹೋಗುವುದು. ಆ ಸಮಯವು ಬರುವುದು. ಆದುದರಿಂದ ನೀವು ಈ ಹಾಲನ್ನು ಸವಿಯಿರಿ ಮತ್ತು ಇದರಿಂದ ಲಾಭಾನ್ವಿತರಾಗಿರಿ ವರ್ಷದಲ್ಲಿ ಕೇವಲ ಒಂದು ಸಲ ಇಲ್ಲಿ ಬಂದರೆ ಸಾಲದು. ಅಕಟಾಕಟ! ಹೆಚ್ಚಿನವರು ಈ ಭಾವನೆ ಹೊಂದುವುದಿಲ್ಲ. ಒಬ್ಬ ಶಿಕ್ಷಕನು ತನ್ನ ವಿದ್ಯಾರ್ಥಿಯನ್ನು ಚೆನ್ನಾಗಿ ಬಲ್ಲವನಾದರೆ, ಅವನ ಗುಣಗಳಿಂದ ಅರಿವುಳ್ಳವನಾದರೆ ಆಗ ಮಾತ್ರ ಆ ಶಿಕ್ಷಕನು ಸರಿಯಾಗಿ ಶಿಕ್ಷಣ ನೀಡಲು ಸಾಧ್ಯ. ಹಾಗೆಯೇ ಕೇವಲ ಜಲ್ಸ ಸಂದರ್ಭದಲ್ಲಿ ಬರುವ ಮಿತ್ರರೊಡನೆ ಆ ರೀತಿಯ ಸಂಬಂಧ ಹೊಂದಲು ಸಾಧ್ಯವಾಗುವುದಿಲ್ಲ. ಹಲವು ಜನರು ನನ್ನನ್ನು ಜಲ್ಸದಲ್ಲಿ ಭೇಟಿ ಮಾಡುತ್ತಾರೆ. ಅವರು ತಮ್ಮ ಹೆಸರುಗಳು ಸಹ

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಆರ್ಥಿಕ ತ್ಯಾಗವನ್ನು ಮಾಡುವವರು ತಮ್ಮ ಆಧ್ಯಾತ್ಮಿಕ ಸ್ಥಿತಿಗಳ ಮೇಲೆ ಕಣ್ಣಿಡಬೇಕು, ಆಗ ಅವರು ಅಲ್ಲಾಹನ ಪ್ರತಿಫಲಗಳ ನಿಜವಾದ ವಾರಸುದಾರರಾಗುತ್ತಾರೆ.**

**ತೆಹ್ರೀಕ್ ಜದೀದ್‌ನ 88 ನೇ ವರ್ಷದ ಯಶಸ್ವಿ ಮತ್ತು ಅನುಗ್ರಹದಾಯಕ ಅಂತ್ಯ ಮತ್ತು 89 ನೇ ವರ್ಷದ ಆರಂಭದ ಪ್ರಕಟಣೆ**

**ಅಲ್ಲಾಹನ ಅನುಗ್ರಹದೀಂದ ಜಮಾಅತ್ ತೆಹ್ರೀಕ್ ಜದೀದ್‌ನ ಆರ್ಥಿಕ ವ್ಯವಸ್ಥೆಯಲ್ಲಿ 16.4 ಮಿಲಿಯನ್ ಪೌಂಡ್ ಗಳನ್ನು ದಾನ ಮಾಡಲು ಸಾಧ್ಯವಾಯಿತು, ಇದು ಕಳೆದ ವರ್ಷಕ್ಕಿಂತ 11 ಮಿಲಿಯನ್ ಪೌಂಡ್ ಹೆಚ್ಚಾಗಿದೆ.**

**ಸರ್ವಶಕ್ನಾತ ಅಲ್ಲಾಹನು ಸ್ಪಷ್ಟಪಡಿಸಿರುವುದೇನೆಂದರೆ ಧರ್ಮದ ಉದ್ದೇಶಕ್ಕಾಗಿ ನೀವು ಮಾಡುವಂತಹ ತ್ಯಾಗಗಳು, ನಿಮ್ಮ ಸಂಪತ್ತನ್ನು ಖರ್ಚು ಮಾಡುತ್ತೀರಿ, ಸರ್ವಶಕ್ತನಾದ ಅಲ್ಲಾಹನು ಅದರ ಪ್ರತಿಫಲವಾಗಿ ಇಹಲೋಕದಲ್ಲಿ ಮತ್ತು ಪರಲೋಕದಲ್ಲಿಯೂ ಪ್ರತಿಫಲವನ್ನು ನೀಡುತ್ತಾನೆ. ಸರ್ವಶಕ್ತನಾದ ಅಲ್ಲಾಹನು ಸಾಲಗಳನ್ನು ಹೊಂದುವುದಿಲ್ಲ**

**ಇಂದು, ಧಾರ್ಮಿಕ ಉದ್ದೇಶಗಳ ನೆರವೇರಿಕೆಗಾಗಿ, ಸರ್ವಶಕ್ತನಾದ ಅಲ್ಲಾಹನು ರಸೂಲುಲ್ಲಾಹ್ (ಸಲ್ಲಲ್ಲಾಹು ಅಲೈಹಿವ ಸಲ್ಲಮ್) ಅವರ ನಿಷ್ಠಾವಂತ ಗುಲಾಮರನ್ನು ಕಳುಹಿಸಿದ್ದಾನೆ ಮತ್ತು ಅವರ ಮೂಲಕ ಇಸ್ಲಾಂ ಧರ್ಮವನ್ನು ಹರಡುವ ಮತ್ತು ಮಾನವೀಯತೆಯ ಸೇವೆಯನ್ನು ಇಂದು ಜಗತ್ತಿನಲ್ಲಿ ಮಾಡಲಾಗುತ್ತಿದೆ.**

**ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಪ್ರಪಂಚದ ಎಲ್ಲೆಡೆ ಲಜ್ನಾ ತನ್ನ ಸಂಖ್ಯೆಗಳಿಗೆ ಅನುಗುಣವಾಗಿ ತನ್ನ ಪಾಲನ್ನು ಪಾವತಿಸುತ್ತಿದ್ದಾರೆ ಮತ್ತು ಯಾರಿಂದಲೂ ಹಿಂದೆ ಉಳಿದಿಲ್ಲ.**

**ಅಲ್ಲಾಹನು ಶ್ರೀಮಂತರಿಂದ ಅಥವಾ ಬಡವರಿಂದ ಸಾಲ ಇರಿಸುವುದಿಲ್ಲ, ಅವನು ಎಲ್ಲರಿಗೂ ಅವನಿಗೆ ಅನುಗುಣವಾಗಿ ಅನುಗ್ರಹಿಸುತ್ತಾನೆ**

**ಈ ವರ್ಷವೂ, ಜರ್ಮನ್ ಜಮಾಅತ್ ಪ್ರಪಂಚದಾದ್ಯಂತದ ಜಮಾಅತ್‌ಗಳಲ್ಲಿ ಮೊದಲ ಸ್ಥಾನದಲ್ಲಿದೆ**

**ವಿವಿಧ ದೇಶಗಳ ಪ್ರಾಮಾಣಿಕ ಅಹ್ಮದೀಯರ ಆರ್ಥಿಕ ತ್ಯಾಗದ ನಂಬಿಕೆ-ಸ್ಫೂರ್ತಿದಾಯಕ ಘಟನೆಗಳ ಪ್ರಸ್ತಾವನೆ**

**ಜಮಾಅತ್ ಯುಕೆ ಯ ಇತಿಹಾಸ ವಿಭಾಗದಿಂದ ಅಹ್ಮದಿಯಾ ಜಮಾಅತ್ ಯುಕೆ ವೆಬ್‌ಸೈಟ್ (www.history.ahmadiyya.uk)ಯ ಉದ್ಘಾಟನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04-11-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

إِيَّاكَ نَعْبُدُ وَإِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ ۔

ಇಂದು ನವೆಂಬರ್ ತಿಂಗಳ ಮೊದಲ ಜುಮುಅ ಆಗಿದೆ. ಆದುದರಿಂದ ರೂಢಿ ಪ್ರಕಾರ ಇಂದಿನ ಖುತ್‌ಬದಲ್ಲಿ ತಹ್‌ರೀಕ್ ಜದೀದ್‌ನ ಹೊಸ ವರ್ಷದ ಆರಂಭದ ಪ್ರಕಟಣೆ ಮತ್ತು ಕಳೆದ ವರ್ಷದಲ್ಲಿ ಅಲ್ಲಾಹನು ನೀಡಿದ ಅನುಗ್ರಹಗಳ ಬಗ್ಗೆ ಪ್ರಸ್ತಾಪಿಸಲಾಗುತ್ತದೆ. ಆದ್ದರಿಂದ ಈ ಸಂಬಂಧವಾಗಿ ನಾನು ಸ್ವಲ್ಪ ಮಾತುಗಳನ್ನು ಹೇಳುತ್ತೇನೆ. ನೆನಪಿಡಬೇಕಾದ ಮೊದಲ ಸಂಗತಿಯೇನೆಂದರೆ, ಪ್ರತಿಯೊಂದು ಕೆಲಸವನ್ನು ನಡೆಸಲು, ಅದರ ಖರ್ಚುಗಳನ್ನು ಈಡೇರಿಸಲು ಸಂಪತ್ತಿನ ಆವಶ್ಯಕತೆಯಿರುತ್ತದೆ. ಈ ಸಂಗತಿಯನ್ನು ವಿಶದೀಕರಿಸುತ್ತಾ ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಪ್ರತಿ ಪ್ರವಾದಿ ತನ್ನ ಉದ್ದೇಶ ಲಕ್ಷ್ಯಗಳನ್ನು ಈಡೇರಿಸಲು ಸಾಂಪತ್ತಿಕ ತ್ಯಾಗಗಳ ಬಗ್ಗೆ ಪ್ರೇರೇಪಿಸಿದ್ದಾರೆ. (ಮಲ್‌ಫೂಝಾತ್, ಸಂಪುಟ-1, ಪುಟ-233, ,ಉದ್ರಣ 1984) ಪವಿತ್ರ ಖುರ್‌ಆನಿನಲ್ಲೂ ಅದರ ಬಗ್ಗೆ ಗಮನ ಸೆಳೆಯಲಾಗಿದೆ.

ಯಾರು ತ್ಯಾಗ ಮಾಡುತ್ತಾರೋ ಅವರಿಗೆ ಅಲ್ಲಾಹನು ಇಹಪರಲೋಕಗಳಲ್ಲಿ ಅನುಗ್ರಹ ನೀಡುತ್ತಾನೆ ಎಂದು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ. ಅಲ್ಲಾಹನು ಸಾಲವಾಗಿ ಏನೂ ಬಾಕಿಯಿರಿಸುವುದಿಲ್ಲ. ಉದಾಹರಣೆಯಾಗಿ ಒಂದೆಡೆ ಅಲ್ಲಾಹನು ಹೇಳುತ್ತಾನೆ:

**ಮಸಲುಲ್ಲಝೀನ ಯುನ್‌ಫಿಖೂನ ಅಮ್ವಾಲಹುಮ್ ಫೀ ಸಬೀಲಿಲ್ಲಾಹಿ ಕಮಸಲಿ ಹಬ್ಬತಿನ್ ಅಂಬತತ್ ಸಬ್‌ಅ ಸನಾಬೀಲ ಫೀ ಕುಲ್ಲಿ ಸುಂಬುಲತಿಮ್ಮಿಅತು ಹಬ್ಬ; ವಲ್ಲಾಹು ಯುಝಾಇಫು ಲಿಮ್ಮೈಯಶಾಉ; ವಲ್ಲಾಹು ವಾಸಿಉನ್ ಅಲೀಮ್** (ಅಲ್‌ಬಖರ: 262) ಅರ್ಥ: ಅಲ್ಲಾಹನ ಮಾರ್ಗದಲ್ಲಿ ತಮ್ಮ ಧನವನ್ನು ವ್ಯಯ ಮಾಡುವವರ ಹೋಲಿಕೆ, ಒಂದು ಧಾನ್ಯ ಏಳು ತೆನೆಗಳನ್ನು ಹೊಂದಿ, ಪ್ರತಿಯೊಂದು ತೆನೆಯಲ್ಲೂ ನೂರು ಕಾಳುಗಳನ್ನು ಉತ್ಪಾದಿಸುವಂತಾಗಿದೆ. ಅಲ್ಲಾಹನು, ತಾನಿಚ್ಛಿಸುವವರಿಗೆ ಇದಕ್ಕಿಂತಲೂ ಅಧಿಕ ಪಟ್ಟು ನೀಡುತ್ತಾನೆ. ಅಲ್ಲಾಹನು ಅತಿ ಉದಾರಿಯೂ ಸರ್ವಜ್ಞನೂ ಆಗಿದ್ದಾನೆ.

ಇದಾಗಿದೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಸತ್ಯವಿಶ್ವಾಸಿಗಳ ಉದಾಹರಣೆ. ಯಾವ ವಿಶ್ವಾಸಿಗಳು ನಿಷ್ಠಾಬದ್ಧರಾಗಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೋ ಅಂತಹ ಜನರು ನೀಡಿದ ಸಾಲವನ್ನು ಅಲ್ಲಾಹನು ಮರುಪಾವತಿ ಮಾಡದೆ ಬಿಟ್ಟುಬಿಡುವುದಿಲ್ಲ. ಅಂತಹ ಜನರಿಗೆ ಇಹ ಪರ ಲೋಕಗಳಲ್ಲಿ ಅಲ್ಲಾಹನು ಪರಿಮಿತಿಯಿಲ್ಲದೆ ಅನುಗ್ರಹ ದಯಪಾಲಿಸುತ್ತಾನೆ. ಈ ಯುಗದಲ್ಲಿ ಅಲ್ಲಾಹನು ಇಸ್ಲಾಮ್ ಧರ್ಮ ಪ್ರಚಾರಕ್ಕೋಸ್ಕರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರ ಹೊಣೆಗಾರಿಕೆ ಏನೆಂದರೆ, ಅವರು ಇಸ್ಲಾಮ್ ಧರ್ಮದ ಪ್ರಚಾರವನ್ನು ಮಾಡುವುದು ಮತ್ತು ಏಕದೇವ ವಿಶ್ವಾಸ (ತೌಹೀದ್) ಸ್ಥಾಪಿಸುವುದು ತಮ್ಮ ಕಡ್ಡಾಯ ಕರ್ತವ್ಯವಾಗಿ ಈಡೇರಿಸಬೇಕಾಗಿದೆ. ನಿಷ್ಠಾವಂತರಾಗಿ ಈ ಹೊಣೆಗಾರಿಕೆಯನ್ನು ಈಡೇರಿಸುವುದಾದರೆ ಅಲ್ಲಾಹನ ಅನುಗ್ರಹಗಳಿಗೆ ಅವರು ವಾರೀಸುದಾರರಾಗುವರು. ಒಂದು ವರದಿಯಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದಾರೆ: ನಮಾಝ್, ಉಪವಾಸ ಮತ್ತು ಅಲ್ಲಾಹನ ನಾಮಸ್ಮರಣೆಯು (ಝಿಕ್ರೆ ಇಲಾಹೀ) ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದ ಹಣವನ್ನು 700 ಪಟ್ಟು ವರ್ಧಿಸುತ್ತದೆ. (ಸುನನ್ ಅಬಿ ದಾವೂದ್, ಕಿತಾಬುಲ್ ಜಿಹಾದ್, ಹದೀಸ್-2498) ಎಂದರೆ ನೀವು ಮಾಡುವ ಧನತ್ಯಾಗದ ಜೊತೆಗೆ ಈ ಸಂಗತಿಗಳು ಕೂಡ ಅವಶ್ಯ. ಈ ಹದೀಸು ಒಬ್ಬ ನೈಜ ಸತ್ಯವಿಶ್ವಾಸಿಯ ಸ್ಥಿತಿಯನ್ನು ಚಿತ್ರಿಸುತ್ತದೆ. ಕೇವಲ ಧನತ್ಯಾಗ ಮಾಡಿಕೊಂಡು, ಅಲ್ಲಾಹನು ಏಳು ನೂರು ಪಟ್ಟು ವರ್ಧಿಸಿಕೊಡುವನು ಎಂದು ಒಬ್ಬ ಸತ್ಯವಿಶ್ವಾಸಿ ಯೋಚಿಸಬಾರದು. ಹಾಗಲ್ಲ,

ಅದರೊಂದಿಗೆ ತನ್ನ ಆರಾಧನೆಗಳ ಮಟ್ಟವನ್ನು ವರ್ಧಿಸಬೇಕಾಗುವುದು, ತನ್ನ ಆತ್ಮದ ಅವಸ್ಥೆಯನ್ನು ಉತ್ತಮಗೊಳಿಸಬೇಕಾಗುವುದು. ಅಲ್ಲಾಹನ ಸ್ಮರಣೆಯಲ್ಲಿ ಸದಾ ನಿರತರಾಗಿರಬೇಕು. ವ್ಯರ್ಥ ಸಂಗತಿಗಳಿಂದ ದೂರವಿರಬೇಕು. ನಿಷ್ಠಾವಂತರಾಗಿ ಕೇವಲ ಅಲ್ಲಾಹನ ಸಂಪ್ರೀತಿಗಾಗಿ ಧನತ್ಯಾಗ ಮಾಡಬೇಕಾಗುವುದು. ಅನಂತರ ಅಲ್ಲಾಹನು ಹೇಗೆ ಅನುಗ್ರಹ ನೀಡುತ್ತಾನೆಂದರೆ ಮನುಷ್ಯ ಆಶ್ಚರ್ಯಚಕಿತನಾಗುತ್ತಾನೆ.

ಕೆಲವೊಮ್ಮೆ ನಮ್ಮ ಸ್ವಲ್ಪ ಸತ್ಕರ್ಮಗಳನ್ನು ಕೂಡ ಅಲ್ಲಾಹನು ಸ್ವೀಕಾರ ಮಾಡುತ್ತಾನೆ. ಹೀಗೆ ದಯಪಾಲಿಸುವುದು ಅಲ್ಲಾಹನ ವಿಶಿಷ್ಟವಾದ ಕೃಪೆಯಾಗಿದೆ. ಹೀಗೆ ಅಲ್ಲಾಹನ ಅಸ್ತಿತ್ವದಲ್ಲಿರುವ ವಿಶ್ವಾಸ ವರ್ಧಿಸುತ್ತದೆ. ನಾವು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದ್ದೇವೆ ಎಂದು ಮಾತ್ರಕ್ಕೆ ಒಬ್ಬ ವ್ಯಕ್ತಿ ಸಂತೋಷಪಡಬಾರದು. ಸಾಂಪತ್ತಿಕ ತ್ಯಾಗದೊಂದಿಗೆ ಇತರ ಆರಾಧನೆಗಳನ್ನೂ ಮಾಡುವುದು ಆವಶ್ಯಕವಾಗಿದೆ. ಆದ್ದರಿಂದ ಧನತ್ಯಾಗ ಮಾಡುವವರು ತಮ್ಮ ಆಧ್ಯಾತ್ಮಿಕ ಸ್ಥಿತಿಗಳ ಕಡೆಗೆ ಗಮನಹರಿಸಬೇಕು. ಆಗಲೇ ಅಲ್ಲಾಹನ ವರದಾನಗಳಿಗೆ ನೈಜ ವಾರಸುದಾರರಾಗಲು ಸಾಧ್ಯ.

ಅಲ್ಲಾಹನು ಸದಾ ಯಥಾರ್ಥವಾದ ಸತ್ಯವಿಶ್ವಾಸಿಗಳಿಗೆ ದಯಪಾಲಿಸುತ್ತಾನೆ. ಅವುಗಳ ಅನೇಕ ಉದಾಹರಣೆಗಳು ಜಮಾಅತಿನಲ್ಲಿ ಕಾಣಬಹುದಾಗಿದೆ. ಹಿಂದಿನ ಕಾಲದ ಉದಾಹರಣೆಗಳನ್ನು ಮಾತ್ರ ನಾವು ನೀಡುತ್ತಿಲ್ಲ. ಅವರಿಗೆ ಅಲ್ಲಾಹನ ಮೇಲೆ ಭರವಸೆ ಹೇಗಿತ್ತು ಎಂಬುದರ ಕುರಿತು ಹಿಂದಿನವರ ಉದಾಹರಣೆಗಳೂ ಇವೆ. ಈಗಿನ ಕಾಲದವರ ಉದಾಹರಣೆಗಳೂ ಇವೆ.

ಹಿಂದಿನ ಕಾಲದ ಉದಾಹರಣೆಗಳಲ್ಲಿ ಹಝ್ರತ್ ರಾಬಿಅ ಬಸರಿಯ ಘಟನೆ ಹೇಳಲಾಗುತ್ತದೆ. ಆ ಮಹಿಳೆಗೆ ಅಲ್ಲಾಹನ ಬಗ್ಗೆ ಹೊಂದಿದ್ದ ಪರಿಪೂರ್ಣ ಭರವಸೆ (ತವಕ್ಕುಲ್) ಎಷ್ಟೊಂದು ಮಹತ್ತರದ್ದಾಗಿತ್ತು. ಒಂದು ಬಾರಿ ಮನೆಯಲ್ಲಿ ಅವರು ಕುಳಿತುಕೊಂಡಿದ್ದರು. ಇಪ್ಪತ್ತು ಅತಿಥಿಗಳು ಬಂದರು. ಮನೆಯಲ್ಲಿ ಕೇವಲ 2 ರೊಟ್ಟಿಗಳು ಇದ್ದುವು. ಈ 2 ರೊಟ್ಟಿಗಳನ್ನು ಕೂಡ ಯಾವನಾದರೂ ದರಿದ್ರನಿಗೆ ಕೊಟ್ಟು ಬರಲು ಅವರು ತನ್ನ ಸೇವಕಿಯೊಡನೆ ಹೇಳಿದರು. ಅಲ್ಲಾಹನ ಮೇಲಿನ ಭರವಸೆಯ ಒಂದು ವಿಸ್ಮಯಕರವಾದ ರೀತಿಯಾಗಿತ್ತು. ಸೇವಕಿ ಚಿಂತಿತಳಾಗಿ ಹೀಗೆ ಭಾವಿಸಿದಳು: ಈ ಸಾತ್ವಿಕರು ಕೂಡ ಮೂರ್ಖರಾಗಿರುತ್ತಾರೆ. ಮನೆಗೆ ಅತಿಥಿಗಳು ಬಂದಿರುವಾಗ, ಮನೆಯಲ್ಲಿದ್ದ ರೊಟ್ಟಿಯನ್ನು ಕೂಡ ಬಡವರಿಗೆ ಕೊಟ್ಟು ಬರಲು ಹೇಳುತ್ತಿದ್ದಾರೆ. ಹೇಗಿದ್ದರೂ ಅವಳು ಅದನ್ನು ಕೊಟ್ಟು ಬಂದ ನಂತರ ಸ್ವಲ್ಪ ಸಮಯಲ್ಲೇ ಒಬ್ಬ ಮಹಿಳೆ ಅಲ್ಲಿಗೆ ಬಂದಳು. ಅವಳನ್ನು ಯಾರೋ ಶ್ರೀಮಂತ ಮಹಿಳೆ ಕಳುಹಿಸಿದ್ದಳು. ಅವಳು 18 ರೊಟ್ಟಿಗಳನ್ನು ತೆಗೆದುಕೊಂಡು ಬಂದಿದ್ದಳು. ಇದು ನನ್ನದ್ದಲ್ಲ ಎಂದು ಹೇಳಿಕೊಂಡು ಹಝ್ರತ್ ರಾಬಿಅ ಬಸರಿ ಅವಳನ್ನು ಮರಳಿ ಕಳುಹಿಸಿದರು. ಇವುಗಳನ್ನು ತೆಗೆದುಕೊಳ್ಳಿರಿ ಎಂದು ಸೇವಕಿ ಹೇಳಿದಳು. ಬೇಡವೆಂದು ಹಝ್ರತ್ ರಾಬಿಅ ಬಸರಿ(ರಹ್) ಹೇಳಿದರು. ಹೇಗಿದ್ದರೂ ನೆರೆಯವಳಾದ ಆ ಶ್ರೀಮಂತ ಮಹಿಳೆ ತನ್ನ ಸೇವಕಿಯನ್ನು ಕರೆದು, ನೀನು ಎಲ್ಲಿಗೆ ಹೋಗಿದ್ದೆ ಎಂದು ಕೇಳಿದಳು. ರಾಬಿಅ ಬಸರಿಯ ಬಳಿಗೆ 20 ರೊಟ್ಟಿಗಳನ್ನು ತೆಗೆದುಕೊಂಡು ಹೋಗಬೇಕಾಗಿತ್ತು. ಈ 18 ರೊಟ್ಟಿಗಳನ್ನು ನಾನು ಬೇರೆಯವರಿಗೆ ಕಳುಹಿಸಬೇಕಾಗಿತ್ತು. ಹಝ್ರತ್ ರಾಬಿಅ ಬಸರಿ(ರಹ್) ಹೇಳುತ್ತಾರೆ: ನಾನು 2 ರೊಟ್ಟಿಗಳನ್ನು ದರಿದ್ರನಿಗೆ ಕೊಟ್ಟಾಗ, ಅದನ್ನು 10 ಪಟ್ಟು ವರ್ಧಿಸಿಕೊಡಬೇಕು ಎಂದು ಅಲ್ಲಾಹನೊಡನೆ ಹೇಳಿದ್ದೆ.

ಆದ್ದರಿಂದ 2ಕ್ಕೆ ಬದಲಿಯಾಗಿ 20 ಬರಬೇಕಾಗಿತ್ತು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹೇಳುತ್ತಾರೆ: ಕೆಲವೆಡೆ ಒಂದಕ್ಕೆ ಬದಲಾಗಿ 10 ಪಟ್ಟು ಕೆಲವೆಡೆ ಒಂದಕ್ಕೆ ಬದಲಾಗಿ 700 ಕೊಡುವುದಾಗಿ ಅಲ್ಲಾಹನು ಪವಿತ್ರ ಖುರ್ಆನಿನಲ್ಲಿ ಹೇಳಿರುವನು. ಅದು ಸತ್ಕರ್ಮದ ಸಂದರ್ಭಾನುಸಾರ ಆಗಿರುತ್ತದೆ. ಎಂದರೆ ಸತ್ಕರ್ಮವನ್ನು ಯಾವ ಸಮಯದಲ್ಲಿ ಯಾವ ರೀತಿಯಲ್ಲಿ ಮಾಡಲಾಗಿದೆ ಹಾಗೂ ಎಷ್ಟು ತ್ಯಾಗವನ್ನು ಮಾಡಲಾಗಿದೆ ಎಂದು ನೋಡಲಾಗುತ್ತದೆ. ಆದರೆ ನೀವು ಅಲ್ಲಾಹನನ್ನು ಪರೀಕ್ಷಿಸುವ ಉದ್ದೇಶದಿಂದ ಯಾಬಾಗಲೂ ಹೀಗೆ ಮಾಡಬೇಡಿರಿ. (ಹಖಾಇಖುಲ್ ಫುರ್ಖಾನ್, ಸಂಪುಟ-1, ಪುಟ-420-421) ಆದರೆ ಅಲ್ಲಾಹನಿಗೆ ನಿಷ್ಠಾವಂತರಾಗಿ ಕೆಲವೊಮ್ಮೆ ಈ ರೀತಿಯಾಗಿ ತ್ಯಾಗಗಳನ್ನು ಮಾಡಿದರೆ, ಅಲ್ಲಾಹನು ಈ ರೀತಿಯಾಗಿಯೂ ದಯಪಾಲಿಸುತ್ತಾನೆ. ಹಝ್ರತ್ ರಾಬಿಅ ಬಸರಿ(ರಹ್)ರ ಉದಾಹರಣೆಗೆ ವೈಯಕ್ತಿಕ ಅತಿಥಿಗಳಿಗೆ ಸಂಬಂಧಿಸಿದ್ದು ಎಂದು ತೋರುತ್ತಿದ್ದರೂ ಅವರ ಬಳಿಗೆ ಜನರು ದೀನಿನ ಉದ್ದೇಶಕ್ಕಾಗಿ ಬರುತ್ತಿದ್ದರು. ಹೇಗಿದ್ದರೂ ಇಂದು ಧಾರ್ಮಿಕ ಉದ್ದೇಶವನ್ನು ಈಡೇರಿಸಲಿಕ್ಕಾಗಿ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರ ಸತ್ಯಪ್ರೇಮಿಯಾದ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಕಳುಹಿಸಿರುವನು. ಅವರ ಮೂಲಕ ಇಂದು ಲೋಕದಲ್ಲಿ ಇಸ್ಲಾಮಿನ ತಬ್ಲೀಗ್ ಮತ್ತು ಮನುಕುಲದ ಸೇವೆಯ ಕೆಲಸಗಳು ನಡೆಯುತ್ತಿವೆ.

ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಪ್ರತಿ ವರ್ಷ ಪುಸ್ತಕಗಳನ್ನು ಪ್ರಕಟಿಸಲು, ಮಸ್‌ಜಿದ್‌ಗಳನ್ನು ನಿರ್ಮಿಸಲು, ಮಿಶನ್ ಹೌಸ್‌ಗಳನ್ನು ನಿರ್ಮಿಸಲು ಮತ್ತಿತರ ಯೋಜನೆಗಳಿಗಾಗಿ ಅನೇಕ ಮಿಲಿಯನ್ ಪೌಂಡ್‌ಗಳನ್ನು ಖರ್ಚು ಮಾಡುತ್ತಾ ಇದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸಂಗ್ರಹಿಸಿದ ಹಣ ಆಫ್ರಿಕದ ದೇಶಗಳಲ್ಲೂ ಭಾರತದಲ್ಲೂ ಬೇರೆ ಅನೇಕ ದೇಶಗಳಲ್ಲೂ ಖರ್ಚು ಮಾಡಲಾಗುತ್ತಿದೆ. ಆರ್ಥಿಕ ಸ್ಥಿತಿ ಈಗ ಕೆಟ್ಟು ಹೋಗಿದ್ದರೂ ನಮ್ಮ ಜಮಾಅತಿನ ಸದಸ್ಯರು ಈ ಖರ್ಚುಗಳನ್ನು ಈಡೇರಿಸುತ್ತಿರುವುದು ಅಲ್ಲಾಹನು ಅನುಗ್ರಹ ನೀಡುತ್ತಾ ಇರುವುದರಿಂದಾಗಿದೆ. ಅಲ್ಲಾಹನು ಸಹ ತಾನು ಸತ್ಯವಿಶ್ವಾಸಿಗಳೊಂದಿಗೆ ವರ್ತಿಸುವ ದೃಶ್ಯಗಳನ್ನು ತೋರಿಸುತ್ತಿದ್ದಾನೆ. ಬಡದೇಶಗಳಲ್ಲಿಯೂ ಶ್ರೀಮಂತ ದೇಶಗಳಲ್ಲಿಯೂ ಪ್ರತಿ ಸ್ಥಳದಲ್ಲಿ ಸಾಂಪತ್ತಿಕ ತ್ಯಾಗ ಮಾಡುವವರನ್ನು ಆಶ್ಚರ್ಯಕರವಾದ ರೀತಿಯಲ್ಲಿ ಅನುಗ್ರಹಿಸುತ್ತಿದ್ದಾನೆ.

ಅಲ್ಲಾಹನು ತ್ಯಾಗಮಾಡುವವರೊಡನೆ ಹೇಗೆ ವರ್ತಿಸುತ್ತಾನೆ ಎಂಬುದರ ಬಗ್ಗೆ ಕೆಲವು ಘಟನೆಗಳನ್ನು ನಾನು ವಿವರಿಸುತ್ತೇನೆ.

ಮೊದಲು ಕ್ರೈಸ್ತನಾಗಿದ್ದ ಈಗ ಲೈಬೀರಿಯದ ಲೋಕಲ್ ಮುಅಲ್ಲಿಂ ಆಗಿರುವ ಮುಹಮ್ಮದ್ ಜಾನ್ಸನ್ ಹೇಳುತ್ತಾರೆ: ನಮ್ಮ ಕೌಂಟಿಯಲ್ಲಿ ಕೆಲವು ತಿಂಗಳ ಹಿಂದೆ ತಬ್ಲೀಗೀ ಪ್ರಯತ್ನದ ಕಾರಣದಿಂದ ಒಂದು ಗ್ರಾಮದಲ್ಲಿ ಜಮಾಅತ್ ಸ್ಥಾಪಿತವಾಯಿತು. ಈ ಗ್ರಾಮದ ಇಮಾಂ ಸಮೇತ ಅಲ್ಲಿನ ಜನರು ಅಹ್ಮದಿಯ್ಯತ್ ಸ್ವೀಕಾರ ಮಾಡಿದರು. ಇದೊಂದು ಸಣ್ಣ ಗ್ರಾಮವಾಗಿದೆ. ಅಲ್ಲಿ ಸರಿಯಾಗಿ ರಸ್ತೆ ಕೂಡ ಇಲ್ಲ. ಮಳೆಯ ಕಾರಣದಿಂದ ಅಲ್ಲಿಗೆ ತಲುಪುವುದೇ ಕಷ್ಟಕರ. ತಹ್ರೀಕ್ ಜದೀದಿನ ಚಂದಾದ ವಿಷಯದಲ್ಲಿ ನಾವು ಅರಿತುಕೊಂಡೇ ಆ ಗ್ರಾಮವನ್ನು ಕಡೆಗಣಿಸಿದೆವು. ಏಕೆಂದರೆ, ಅಲ್ಲಿಯ ಜನರು ಹೊಸದಾಗಿ ಅಹ್ಮದಿಯಾಗಿದ್ದರು. ರಸ್ತೆಯು ಸರಿಯಿರಲಿಲ್ಲ, ಗ್ರಾಮ ಕೂಡ ಸಣ್ಣದಾಗಿತ್ತು. ಮುಂದಿನ ವರ್ಷ ತಹ್ರೀಕ್ ಜದೀದಿನಲ್ಲಿ ಸೇರಿಸೋಣ ಎಂದು ಭಾವಿಸುತ್ತಿದ್ದೆವು. ಒಂದು ದಿನ ಗ್ರಾಮದ ಇಮಾಂ ಅಬೂ ಬಕಾಯಿ ಸಾಹಿಬ್ ಅಚಾನಕ್ಕಾಗಿ ಟಬ್ ಮೇನ್ ಮಿಶನ್ ಹೌಸಿಗೆ ತಲುಪಿದರು. ಜಮಾಅತಿನ 21 ಸದಸ್ಯರು ತಹ್ರೀಕ್ ಜದೀದಿನ ಚಂದಾ ಎಂದು ಹೇಳಿಕೊಂಡು ಸ್ವಲ್ಪ ಹಣವನ್ನು ಬಂದ ಕೂಡಲೇ ಕೊಟ್ಟರು. ತಹ್ರೀಕ್ ಜದೀದಿನ ಬಗ್ಗೆ ಹೇಳದೇ ನಮಗೆ ಇದರ ಬಗ್ಗೆ ಹೇಗೆ ಗೊತ್ತಾಯಿತು ಎಂದು ಮುಅಲ್ಲಿಂ ಸಾಹಿಬ್‌ರು ಕೇಳಿದರು. ಅವರು ಹೇಳಿದರು: ನಾನು ರೇಡಿಯೊದಲ್ಲಿ ಜಮಾಅತಿನ ಪ್ರೋಗ್ರಾಂ ನಿಯತವಾಗಿ ಆಲಿಸುತ್ತೇನೆ. ಕಳೆದ ವಾರ ರೇಡಿಯೋ ಪ್ರೋಗ್ರಾಮಿನಲ್ಲಿ ತಹ್ರೀಕ್ ಜದೀದಿನ ಪರಿಚಯ ಮತ್ತು ಅದರ ಪ್ರಾಮುಖ್ಯದ ಬಗ್ಗೆ ನೀವು ಹೇಳಿದಾಗ, ನಾನು ಅದನ್ನು ಜಮಾಅತಿನ ಮುಂದಿರಿಸಿದ್ದೆ. ಆಗ ಸದಸ್ಯರು ಚಂದವನ್ನು ನೀಡಿದರು. ಅಲ್ಲಾಹನು ಸ್ವತಃ ಅವರ ಹೃದಯಗಳಲ್ಲಿ ತ್ಯಾಗದ ಮನೋಭಾವವನ್ನು ಉಂಟುಮಾಡುತ್ತಾನೆ.

ಗೇಂಬಿಯದ ಅಮೀರ್ ಸಾಹಿಬ್ ಬರೆಯುತ್ತಾರೆ: ಒಂದು ಗ್ರಾಮದಲ್ಲಿ ತಹ್ರೀಕ್ ಜದೀದಿಗೆ ಸಂಬಂಧಿಸಿ ಹೇಳಲಾಯಿತು. ಎಲ್ಲರು ನವ ಅಹ್ಮದಿಗಳಾಗಿದ್ದರು. 57 ವರ್ಷದ ಮಹಿಳೆಯಾದ ಸಿಸ್ಟರ್ ಫಾತೂ 200 ಡಿಲಾಸಿ ತೆಗೆದುಕೊಂಡು ಚಂದಾವಾಗಿ ನೀಡಿದರು. ಅವರು ಹೇಳಿದರು: ಇಸ್ಲಾಮಿನ ಪ್ರಚಾರ ಮಾಡಲು ಇರುವ ಒಂದೇ ಮಾರ್ಗ ಇದೇ ಆಗಿದೆ. ತನ್ನ ಕುಟುಂಬದ ಖರ್ಚಿಗಾಗಿ ಇರಿಸಿದ ಕೊನೆಯ ಹಣವಾಗಿತ್ತು ಅದು. ಇಸ್ಲಾಮಿನ ತಬ್ಲೀಗಿಗಾಗಿ ಈ ಹಣದ ಆವಶ್ಯಕತೆಯಿರುವ ಕಾರಣದಿಂದ ನೀಡುತ್ತಿದ್ದೇನೆ ಎಂದು ಹೇಳಿದರು. ಈ ಮಾತುಗಳು ನಡೆಯುತ್ತಿರುವಾಗ, ಸ್ವಿಟ್ಝರ್‌ಲ್ಯಾಂಡಿನಲ್ಲಿರುವ ಅವರ ಮಗನ ಫೋನ್ ಕರೆ ಬಂತು. ಅವನು ಹೇಳಿದನು: 12 ಸಾವಿರದ ಇನ್ನೂರು ಡಿಲಾಸಿ ಕಳುಹಿಸಿದ್ದೇನೆ. ಇದನ್ನು ಕೇಳಿ ಆ ಮಹಿಳೆ ಸಭೆಯಲ್ಲೇ ಅಳುತ್ತಾ ಹೀಗೆ ಹೇಳಿದಳು: ಅಲ್ಲಾಹನು ಯಾವ ರೀತಿಯಲ್ಲಿ ನಮ್ಮ ಮೇಲೆ ಕೃಪೆದೋರಿದ್ದಾನೆ ಎಂದು ನೋಡಿರಿ. ಈಗ ನಾನು ಇನ್ನಷ್ಟು ಚಂದವನ್ನು ನೀಡುತ್ತೇನೆ. ಅಲ್ಲಿದ್ದ ಜನರು ಕೂಡ ಚಕಿತರಾಗಿದ್ದರು. ಆರು ತಿಂಗಳಿಗಿಂತ ಹೆಚ್ಚಿನ ಸಮಯದಿಂದ ಮಗನು ಫೋನ್ ಮಾಡುತ್ತಿರಲಿಲ್ಲ. ತಾಯಿಯ ಬಗ್ಗೆ ಕೇಳುತ್ತಿರಲಿಲ್ಲ. ಸಾಂಪತ್ತಿಕವಾಗಿ ತಾಯಿಯ ಸ್ಥಿತಿ ಬಹಳ ಹೀನಾಯವಾಗಿತ್ತು. ಆದರೆ ಅದೇ ಸಂದರ್ಭದಲ್ಲಿ ಅಲ್ಲಾಹನು ಹಣದ ಏರ್ಪಾಡು ಮಾಡಿದನು. ಫೋನ್ ಬಂತು ಮತ್ತು ಅದರೊಂದಿಗೆ ಹಣವೂ ಬಂತು. ಈ ಘಟನೆಯಿಂದ ಜನರ ಮೇಲೆ ಪ್ರಭಾವ ಉಂಟಾಯಿತು. ನಾವು ಮರಣದ ವರೆಗೆ ಅಹ್ಮದಿಯಾಗಿರುವೆವು ಎಂದು ಅವರು ಹೇಳಿದರು.

ತಂಜಾನಿಯಾದ ಪಾಶ್ಚಾತ್ಯದಲ್ಲಿರುವ ಗೀಟಾ ಪ್ರದೇಶದಲ್ಲಿ ಒಂದು ಜಮಾಅತ್ ಆಗಿದೆ. ಅಲ್ಲಿನ ಓರ್ವ ಮುಅಲ್ಲಿಮ್ ಸಾಹಿಬ್ ಬರೆಯುತ್ತಾರೆ

ಅಬ್ದುಲ್ಲಾ ಸಾಹಿಬ್ ಎಂಬ ಈರ್ವ ಖಾದಿಮ್ ಇದ್ದಾರೆ. ಕೆಲವು ತಿಂಗಳ ಹಿಂದೆ, ಅವರು ಬೈಅತ್ ಮಾಡಿದರು. ಒಂದು ದಿನ ಅವರು ಖುತ್ಬ ಜುಮುಅದಲ್ಲಿ ಚಂದಾ ತೆಹ್ರೀಕ್-ಎ-ಜಾದೀದ್ ಬಗ್ಗೆ ಕೇಳಿದರು, ಇದು ಚಂದವನ್ನು ಪಾವತಿಸಲು ಕೊನೆಯ ತಿಂಗಳು ಎಂದು ಅವರಿಗೆ ತಿಳಿಯಿತು ಮತ್ತು ಪ್ರತಿಯೊಬ್ಬ ಅಹ್ಮದಿಯು ಅನುಗ್ರಹಗಳನ್ನು ಪಡೆಯಲು ಅವನ ಕೈಯಲ್ಲಾದಷ್ಟು ದಾನದಲ್ಲಿ ನೀಡಬೇಕು. ಅಬ್ದುಲ್ಲಾ ಸಾಹಿಬ್ ಅವರ ಬಳಿ ಹಣವಿರಲಿಲ್ಲ. ಮರುದಿನ ಸಂಜೆಯೊಳಗೆ ತೆಹ್ರೀಕ್-ಇ-ಜದೀದ್ ಚಂದಾಗೆ ಖಂಡಿತವಾಗಿಯೂ ಸ್ವಲ್ಪ ಹಣವನ್ನು ಪಾವತಿಸುವುದಾಗಿ ಅವರು ವಾಗ್ದಾನ ನೀಡಿದರು. ಮರುದಿನ ಅವರು ಕೆಲಸ ಹುಡುಕಿಕೊಂಡು ಹೊರಟರು. ಒಬ್ಬ ಮನುಷ್ಯನಿಗೆ ಭೂಮಿಯನ್ನು ಉಳಿಮೆ ಮಾಡುವುದಕ್ಕೆ ಒಬ್ಬ ಮನುಷ್ಯನ ಅಗತ್ಯವಿತ್ತು ಅವನು ಅಬ್ದುಲ್ಲಾ ಸಾಹಿಬ್‌ಗೆ ಕೆಲಸವನ್ನು ಕೊಟ್ಟನು ಮತ್ತು ಅವರು ದಿನವಿಡೀ ಹೆಚ್ಚಿನ ಶ್ರಮದಿಂದ ಕೆಲಸವನ್ನು ಪೂರ್ಣಗೊಳಿಸಿದರು ಆ ಕೆಲಸವನ್ನು ಸಾಮಾನ್ಯ ಪರಿಸ್ಥಿತಿಯಲ್ಲಿ ನೋಡಿದರೆ ಎಡರು ದಿವಸಗಳಲ್ಲಿ ಮಾಡಬೇಕಾದ ಕೆಲಸವನ್ನು ಅವರು ಅದನ್ನು ಸಂಜೆಯವರೆಗೆ ಮಾಡಿದರು. ತದನಂತರ ಅವರಿಗೆ ಈ ಕೆಲಸದಿಂದ ಸಿಕ್ಕ ಹಣವನ್ನು ತೆಗೆದುಕೊಂಡು ಸಂಪೂರ್ಣವಾಗಿ ತೆಹ್ರೀಕ್-ಎ-ಜದೀದ್ ಚಂದಾಗೆ ಪಾವತಿಸಲು ಬಂದರು. ಈ ಘಟನೆಯನ್ನು ವಿವರಿಸಿದ ನಂತರ, ಅಲ್ಲಾಹನು ನನ್ನ ನಿಯ್ಯತ್‌ನಲ್ಲಿ ಅನುಗ್ರಹವನ್ನು ಇರಿಸಿದನು ಮತ್ತು ಕೇವಲ ಅಲ್ಲಾಹನ ಅನುಗ್ರಹದಿಂದ ಆರ್ಥಿಕ ತ್ಯಾಗ ಮಾಡುವ ಅವಕಾಶವನ್ನು ನೀಡಿದನು ಎಂದು ಅವರು ಹೇಳಿದರು. ಈ ಭಾವನೆಯು ಕೂಡ ಇದರೊಂದಿಗೆ ಬೆಳೆಯುತ್ತದೆ.

ಸೊಲೊಮನ್ ದ್ವೀಪವು ಆಸ್ಟ್ರೇಲಿಯಾದ ಸಮೀಪವಿರುವ ಒಂದು ದ್ವೀಪವಾಗಿದೆ. ಆಸ್ಟ್ರೇಲಿಯಾದ ಮುರಬ್ಬಿ ಸಾಹಿಬ್ ಅವರು ಸೊಲೊಮನ್ ದ್ವೀಪಕ್ಕೆ ಭೇಟಿ ನೀಡಿದಾಗ, ತರಬೇತಿ ಮತ್ತು ತಬ್ಲೀಗಿ, ಆಡಳಿತಾತ್ಮಕ ಕಾರ್ಯಕ್ರಮಗಳ ಜೊತೆಗೆ, ತೆಹ್ರೀಕ್-ಎ-ಜಾದೀದ್ ಅಂತ್ಯದ ವೇಳೆಗೆ ಚಂದಾ ನೀಡಲು ಸ್ನೇಹಿತರಲ್ಲಿ ವಿನಂತಿಸಲಾಯಿತು. ಇತ್ತ ಕಡೆ ಗಮನಸೆಳೆದಾಗ ಅಲ್ಲಿ ಮಹಿಳೆಯೊಬ್ಬರು ಇದ್ದರು. ಆಕೆಯ ಪತಿ ಮುಸ್ಲಿಮೇತರ. ಇಬ್ಬರೂ ಕೋಳಿ ಫಾರಂ ನಡೆಸುತ್ತಿದ್ದಾರೆ. ಚಂದಾವನ್ನು ಪಾವತಿಸುವ ಬಗ್ಗೆ ನೆನಪಿಸಲು ತೆಹ್ರೀಕ್-ಎ-ಜದೀದ್ ಕಾರ್ಯದರ್ಶಿ ಅವರು ಅವರ ಮನೆಗೆ ಹೋದಾಗ ಅವರು ಮನೆಯಲ್ಲಿ ಇರಲಿಲ್ಲ. ಅವರ ಮಕ್ಕಳು ತಮ್ಮಲ್ಲಿದ್ದ ಸ್ವಲ್ಪ ಹಣವನ್ನು ಪಾವತಿಸಿದರು. ಮಹಿಳೆ ಮನೆಗೆ ಹಿಂದಿರುಗಿದಾಗ, ತೆಹ್ರೀಕ್-ಎ-ಜಾದಿದ್‌ನ ಕಾರ್ಯದರ್ಶಿ ಬಂದಿದ್ದು ಹೀಗೆ ಎಂದು ಮಕ್ಕಳು ಹೇಳಿದರು. ಅವಳು ತಕ್ಷಣ ಕಾರ್ಯದರ್ಶಿಯ ಮನೆಗೆ ಹೋಗಿ ತೆಹ್ರೀಕ್-ಇ-ಜಾದೀದ್‌ಗೆ ಒಂದು ಸಾವಿರ ಡಾಲರ್‌ಗಳನ್ನು ಚಂದವಾಯಾಗಿ ನೀಡಿದಳು. ಅದಕ್ಕೆ ಕಾರ್ಯದರ್ಶಿ ನಾನು ನನ್ನ ಎಲ್ಲ ಸ್ನೇಹಿತರಿಂದ ಚಂದಾವನ್ನು ಪಡೆದಿದ್ದೇನೆ ಎಂದು ಹೇಳಿದರು. ಪಟ್ಟಿ ಸಿದ್ಧಪಡಿಸಿ ಕೊಟ್ಟಿ ಬಂದಿದ್ದೇನೆ, ಮುಂದಿನ ವರ್ಷದಲ್ಲಿ ಈ ಚಂದವನ್ನು ಸೇರಿಸಿಕೊಳ್ಳುತ್ತೇನೆ ಎಂದು ಅವರು ಹೇಳಿದಾಗ ಅವರು ಹೇಳಿದಳು: ಇಲ್ಲ! ಈ ವರ್ಷ ಇಷ್ಟು ಕೊಡುತ್ತೇನೆ ಎಂದು ನನ್ನ ಅಲ್ಲಾಹನಲ್ಲಿ ವಾಗ್ದಾನ ಮಾಡಿದ್ದೇನೆ, ಆದ್ದರಿಂದ ಈ ವರ್ಷದಲ್ಲಿ ಅದನ್ನು ಪರಿಗಣಿಸಿ. ಹೀಗಾಗಿ ಅವರ ಮನವಿ ಮೇರೆಗೆ ಮತ್ತೆ ಹೊಸ ಪಟ್ಟಿ ಸಿದ್ಧಪಡಿಸಿ ರಾತ್ರೋರಾತ್ರಿ ಕೇಂದ್ರಕ್ಕೆ ವರದಿ ಸಲ್ಲಿಸಲಾಯಿತು.

ಸರ್ವಶಕ್ತನಾದ ಅಲ್ಲಾಹನು ಹೇಗೆ ಎಷ್ಟು ಪಟ್ಟು ಹೆಚ್ಚಿಸಿ ನೀಡುತ್ತಾನೆ ಎಂಬುದರ ಬಗ್ಗೆ ದರ್ಶನಗಳಿವೆ.

ಗಿನಿ-ಕನಾಕರಿಯ ಓರ್ವ ಮುಬಲ್ಲಿಗ್ ಸಾಹಿಬರು ಬರೆಯುತ್ತಾರೆ: ಇಲ್ಲಿ ಕಾಫಿಲ್ಯ ಎಂಬ ಸ್ಥಳವಿದೆ. ಅಲ್ಲಿನ ಮಿಷನರಿ ಅವರು ತಮ್ಮ ಖುತ್ಬ ಜುಮುಅದಲ್ಲಿ ತೆಹ್ರೀಕೆ ಜದೀದ್‌ನ ಬಗ್ಗೆ ಗಮನ ಸೆಳೆದರು. ನಂತರ ಪ್ರತ್ಯೇಕವಾಗಿ ಮನೆಗಳಿಗೆ ಭೇಟಿ ನೀಡಿದರು. ಅವರು ಮುಹಮ್ಮದ್ ಸಿಲಾ ಸಾಹಿಬ್ ಎಂಬ ಯುವಕನನ್ನು ಭೇಟಿಯಾದರು ಮತ್ತು ಚಂದಾದ ಪಾವತಿಯತ್ತ ಗಮನ ಸೆಳೆದರು. ಅದೇ ಸಮಯದಲ್ಲಿ ಅವರು ತಮ್ಮ ಜೇಬಿನಿಂದ ಹತ್ತು ಸಾವಿರ ಗಿನಿಯನ್ ಫ್ರಾಂಕ್‌ಗಳನ್ನು ತೆಗೆದುಕೊಂಡು ತೆಹ್ರೀಕ್-ಎ-ಜಾದೀದ್‌ನಲ್ಲಿ ಪಾವತಿಸಿದರು. ನನ್ನ ಬಳಿ ಮಧ್ಯಾಹ್ನ ಮತ್ತು ರಾತ್ರಿಯ ಊಟವನ್ನು ಖರೀದಿಸಲು ಇಷ್ಟ ಹಣ ಇತ್ತು ಆದರೆ ನಾನು ಇಂದು ಸರ್ವಶಕ್ತನಾದ ಅಲ್ಲಾಹನಿಗಾಗಿ ಹಾಗೂ ಅಲ್ಲಾಹನ ಸಂಪ್ರೀತಿಗಳಿಸಲಿಕ್ಕಾಗಿ ಉಪವಾಸ ಮಾಡುತ್ತೇನೆ ಎಂದು ಹೇಳಿದರು ಮತ್ತು ಈ ಘಟನೆಯ ನಾಲ್ಕು ದಿನಗಳ ನಂತರ ಆ ಯುವಕ ಮಿಷನರಿಗೆ ಕರೆ ಮಾಡಿ ಸರ್ವಶಕ್ತನಾದ ಅಲ್ಲಾಹನು ನನ್ನನ್ನು ತ್ಯಾಗವನ್ನು ಸ್ವೀಕರಿಸಿದ್ದಾನೆ ಎಂದು ಹೇಳಿದರು. ನಾನು ಮೈನಿಂಗ್ ಕಂಪನಿಯೊಂದರಲ್ಲಿ ಡ್ರೈವರ್ ಕೆಲಸಕ್ಕೆ ಇಂಟರ್ ವ್ಯೂ ನೀಡಿದ್ದ. ಇಲ್ಲಿ ಅಲ್ಲಾಹನ ಅನುಗ್ರಹದಿಂದ ಐದೂವರೆ ಮಿಲಿಯನ್ ಗಿನಿ ಫ್ರಾಂಕ್ ಮಾಸಿಕ ಸಂಬಳದಲ್ಲಿ ಐದು ವರ್ಷಗಳ ಗುತ್ತಿಗೆ ಪಡೆದಿದ್ದೇನೆ ಎಂದು ಹೇಳಿದರು. ಈ ರೀತಿಯಾಗಿ ಅಲ್ಲಾಹನು ನನಗೆ ಸಾವಿರ ಪಟ್ಟು ಹೆಚ್ಚಿಸಿ ನೀಡಿದನು. ಅವರು ವರ್ಷಕ್ಕೆ 10,000 ಚಂದದಲ್ಲಿ ನೀಡಿದ್ದರು, ಆದರೆ ವರ್ಷದಲ್ಲಿ ಹೆಚ್ಚಳವು 700 ಪಟ್ಟಿನಿಂದ 6,600 ಪಟ್ಟು ಹೆಚ್ಚಾಗಿದೆ. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: ನಾನು ಬಯಸಿದರೆ, ನಾನು ಅದಕ್ಕಿಂತ ಹೆಚ್ಚಿನದನ್ನು ನೀಡುತ್ತೇನೆ, ಆದ್ದರಿಂದ ಅದಕ್ಕಿಂತ ಹೆಚ್ಚಿನದನ್ನು ನೀಡುವ ದೃಷ್ಯ ಇಲ್ಲಿದೆ.

ನೈಜೀರಿಯ ಲಜ್ನ ಸದರ್ ಬರೆಯುತ್ತಾರೆ: ಅಲ್ಲಾಹನ ಅನುಗ್ರಹದಿಂದ ಲಜ್ನ ಇಮಾಇಲ್ಲಾಹ್ ನೈಜೀರಿಯ ತನ್ನ ಮೊದಲ ತ್ರೈಮಾಸಿಕ ನೇಶನಲ್ ತರ್‌ಬಿಯತೀ ಕ್ಲಾಸ್ ಸಂಘಟಿಸಿತು. ಅನೇಕ ಮಹಿಳೆಯರು ಭಾಗವಹಿಸಿದರು. ತಹ್ರೀಕ್ ಜದೀದ್ ವರ್ಷ ಮುಗಿಯಲು ಸ್ವಲ್ಪ ಕಾಲ ಉಳಿದಿದೆ. ಆದ್ದರಿಂದ ಅದರ ವಾಗ್ದಾನವನ್ನು ಬರೆಯಲು ಪ್ರಯತ್ನಿಸಿರಿ ಎಂದು ಸಾಮಾನ್ಯವಾಗಿ ಕ್ಲಾಸಲ್ಲಿ ಗಮನ ಸೆಳೆಯಲಾಗಿತ್ತು. ಆದರೆ ಲಜ್ನದವರು ಕೂಡಲೇ ಚಂದವನ್ನು ನೀಡಲು ಶುರುಮಾಡಿದರು. ಇನ್ನೂ ಸಮಯವಿದೆ ಎಂದು ಹೇಳಲಾದರೂ ನಾವು ಈಗಲೇ ಕೊಡುವೆವು ಎಂದು ಅವರು ಹೇಳಿದರು. ಇದನ್ನು ನೋಡಿ ಇತರ ಮಹಿಳೆಯರು ಕೂಡ ಮುಂದೆ ಬಂದು ಧನತ್ಯಾಗ ಮಾಡಿದರು. ಹೀಗೆ ದೊಡ್ಡದಾದ ಮೊತ್ತ ಒಟ್ಟುಗೂಡಿತು.

ಅಲ್ಲಾಹನ ಅನುಗ್ರಹದಿಂದ ಬಹುತೇಕ ಪ್ರತಿಯೊಂದು ಜಾಗದಲ್ಲಿ ಲಜ್ನ ತನ್ನ ಚಂದವನ್ನು ನೀಡುತ್ತಾರೆ. ಕೆಲವು ದೇಶಗಳಲ್ಲಿ ಕೆಲವೊಮ್ಮೆ ಖುದ್ದಾಮ್ ಮತ್ತು ಅನ್ಸಾರ್‌ರೊಡನೆ ಹೇಳಬೇಕಾಗುತ್ತದೆ. ಲಜ್ನ ತ್ಯಾಗದಲ್ಲಿ ಮುಂದಿದ್ದಾರೆ. ಪುರುಷರು ಕೂಡ ಅದೇ ಪ್ರಕಾರ ಧನತ್ಯಾಗ ಮಾಡಬೇಕು.

ಸೇಂಟ್ ಪೀಟರ್ಸ್‌ಬರ್ಗ್ ರಶಿಯಾದ ಮುಬಲ್ಲಿಗ್ ಸಾಹೆಬರು ಬರೆಯುತ್ತಾರೆ: ಅರ್ಸಾನ್ ಬೇಕ್ ಸಾಹಿಬ್ ಇವರು ರಶಿಯಾದ ಒಂದು ರಾಜ್ಯಕ್ಕೆ ಸೇರಿದವರಾಗಿದ್ದಾರೆ. ಕಳೆದ ವರ್ಷ, ನಾನು ತೆಹ್ರೀಕ್ ಜದೀದ್‌ನ ಹೊಸ ವರ್ಷವನ್ನು ಘೋಷಿಸಿದಾಗ, ಅರ್ಸಾನ್ ಸಾಹಿಬ್ ಅವರು ತೆಹ್ರೀಕ್ ಜದೀದ್‌ನಲ್ಲಿ ಒಂದು ಸಾವಿರ ರೂಬಲ್ಸ್‌ಗಳ ತ್ಯಾಗವನ್ನು ನೀಡುವುದಾಗಿ ಹೇಳಿದರು ಮತ್ತು ಅವರು ಅದನ್ನು ಕಳೆದ ವರ್ಷ ಮಾಡಿದರು. ಈಗ ಅವರು ಈ ವರ್ಷ ನಾನು ಹತ್ತು ಸಾವಿರ ರೂಬಲ್ಸ್ಗಳನ್ನು ನೀಡುವುದಾಗಿ ವಾಗ್ದಾನ ಮಾಡುತ್ತೇನೆ ಎಂದು ಹೇಳಿದರು ಮತ್ತು ನಂತರ ಅವರು ಪ್ರಾರಂಭಿಸಲಿರುವ ತಮ್ಮ ಒಂದು ಉದ್ಯೋಗದ ಬಗ್ಗೆ ಹೇಳಿದರು. ಏನೇ ಇರಲಿ ಅವರು ಜುಲೈನಲ್ಲಿ ಹತ್ತು ಸಾವಿರ ರೂಬಲ್ಸ್ಗಳನ್ನು ತಮ್ಮ ವಾಗ್ದಾನವನ್ನು ಪೂರೈಸಿದರು. ಉಕ್ರೇನ್ ಯುದ್ಧದ ಕಾರಣದಿಂದಾಗಿ ರಶಿಯಾದಲ್ಲಿ ಪರಿಸ್ಥಿತಿಯು ಬಿಗಿಯಾಗಿದೆ ಮತ್ತು ರೂಬಲ್ನ ಮೌಲ್ಯವು ಬಹಳಷ್ಟು ಕುಸಿದಿದೆ, ಆದರೆ ಅವರು ಅದನ್ನು ನೀಡಿದರು. ಆದ್ದರಿಂದ ಈ ಒಟ್ಟು ಹತ್ತು ಸಾವಿರ ರೂಬಲ್‌ಗಳು ನೂರ ಎಪ್ಪತ್ತೆಂಟು ಯುರೋಗಳಾಗಿವೆ, ಆದರೆ ಅಲ್ಲಿನ ಪರಿಸ್ಥಿತಿಗಳ ಪ್ರಕಾರ, ಇದು ಅವರಿಗೆ ದೊಡ್ಡ ಮೊತ್ತವಾಗಿತ್ತು. ಪಾವತಿಸಿದ ನಂತರ, ನಾನು ಇದಕ್ಕೆ ಹೆಚ್ಚುವರಿಯಾಗಿ ಐದು ನೂರು ರೂಬಲ್‌ಗಳನ್ನು ನೀಡುವುದನ್ನು ಮುಂದುವರಿಸುತ್ತೇನೆ ಮತ್ತು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ನನ್ನ ವ್ಯವಹಾರವು ಕೆಟ್ಟ ಪರಿಸ್ಥಿತಿಗಳ ನಡುವೆಯೂ ಆ ರೀತಿಯಲ್ಲಿ ಅನುಗ್ರಹಿಸಿದ್ದಾನೆ ಎಂದು ಹೇಳಿದರು. ನನಗೆ ಸಾಕಷ್ಟು ಆದಾಯವಿದೆ ಅದರ ನಂತರ ಅವರು ಅದನ್ನು 1000 ರೂಬಲ್‌ಗಳಾಗಿ ಮಾಡಿದರು ಮತ್ತು ಇದನ್ನು ಪ್ರತಿದಿನವೂ ಪಾವತಿಸುತ್ತಿದ್ದಾರೆ.

ಕ್ಯಾಮರೂನ್‌ನ ಉತ್ತರ ನಗರವು ಮರೌವಾ ಎಂದು ಅಲ್ಲಿನ ಮುಅಲ್ಲಿಮ್ ಬರೆಯುತ್ತಾರೆ. ಇದು ಸಹ ಬಡವರ ನಂಬಿಕೆ ಮತ್ತು ದಾನದ ಆಶೀರ್ವಾದದಲ್ಲಿ ಪರಿಪಕ್ವತೆಯ ಘಟನೆಯಾಗಿದೆ. ಅಬ್ದುಲ್ಲಾ ಸಾಹಿಬ್ ಒಬ್ಬ ಅವ ಅಹ್ಮದಿ ಆಗಿದ್ದಾರೆ. ಅತ್ಯಂತ ಬಡ ವ್ಯಕ್ತಿ. ಕಳೆದ ವರ್ಷ, ಅವರು ತೆಹ್ರೀಕ್ ಜದೀದ್‌ಗೆ ಅರ್ಧ ಬಕೆಟ್ ಜೋಳವನ್ನು ಅಂದರೆ ಐನೂರು ಕಿಲೋ ಜೋಳವನ್ನು ಚಂದದಲ್ಲಿ ನೀಡಿದ್ದರು ಮತ್ತು ಇದರಿಂದಾಗಿ ಸರ್ವಶಕ್ತನಾದ ಅಲ್ಲಾಹನು ನನಗೆ ಐದು ಚೀಲಗಳನ್ನು ನೀಡಿದನು ಎಂದು ಅವರು ಹೇಳುತ್ತಾರೆ. ಮುನ್ನೂರ ಐವತ್ತು ಕಿಲೋ ಎಪ್ಪತ್ತು ಪಟ್ಟು ಹೆಚ್ಚಾಯಿತು. ಈ ವರ್ಷ, ಅವರು ತುಂಬಾ ಚಿಂತಿತರಾಗಿದ್ದರು ಎಂದು ಅವರು ಹೇಳುತ್ತಾರೆ. ಗೊಬ್ಬರ ದುಬಾರಿಯಾಯಿತು. ಬೆಲೆಗಳು ಏರಿದವು. ನಾನು ಖರೀದಿಸಲು ಸಾಧ್ಯವಾಗಲಿಲ್ಲ. ಫಸಲು ಚೆನ್ನಾಗಿರದೇ ಇರಬಹುದೆಂಬ ಆತಂಕ ಕಾಡುತ್ತಿತ್ತು. ಆದರೆ, ನನ್ನ ಕೈಲಾದಷ್ಟು ಕಷ್ಟಪಟ್ಟು ಕೆಲಸ ಮಾಡಿದ್ದೇನೆ ಎನ್ನುತ್ತಾರೆ. ಅಲ್ಲಾಹನು ಅವರನ್ನು ತುಂಬಾ ಅನುಗ್ರಹಿಸಿದನು, ಈ ವರ್ಷ ಅವರ ಫಸಲು ಎರಡು ಪಟ್ಟು ಹೆಚ್ಚಾಯಿತು ಮತ್ತು ಅವರು ತೆಹ್ರೀಕ್ ಜದೀದ್‌ಗೆ ಎಪ್ಪತ್ತು ಕಿಲೋ ಚೀಲಗಳನ್ನು ಕೊಡುಗೆಯಾಗಿ ನೀಡಿದರು. ತೆಹ್ರೀಕ್ ಜದೀದ್‌ನ ಚಂದದ ಅನುಗ್ರಹದೊಂದಿಗೆ, ಅಲ್ಲಾಹನು ನನ್ನ ಶ್ರಮ ಮತ್ತು ಫಸಲನ್ನು ಆಶೀರ್ವದಿಸುತ್ತಾನೆ ಎಂದು ನಾನು ನನ್ನ ಕುಟುಂಬಕ್ಕೂ ಹೇಳುತ್ತೇನೆ ಎಂದು ಅವರು ಹೇಳುತ್ತಾರೆ.

ಗ್ಯಾಂಬಿಯಾದ ಅಮೀರ್ ಸಾಹಿಬ್ ಬರೆಯುತ್ತಾರೆ. ಸಣ್ಣ ಘಟನೆಗಳು ಇವೆ ಆದರೆ ಬಡ ಅಹ್ಮದೀಯರಿಗೆ ಅವು ಬಹಳ ಮುಖ್ಯ. 2014 ರಲ್ಲಿ

ಬೈಅತ್ ಮಾಡಿದ ಹಳ್ಳಿಯ ಸ್ನೇಹಿತ ಪಾಥೆ ಸೇಸೆ ಸಾಹಿಬ್ ಅವರು ಜಮಾಅತ್‌ಗೆ ಸೇರುವ ಮೊದಲು ನಿರುದ್ಯೋಗಿಯಾಗಿದ್ದರು ಎಂದು ಹೇಳಿದರು. ಕೆಲಸ ಪಡೆಯುಲು ಹಲವು ಬಾರಿ ಪ್ರಯತ್ನಿಸಿದರೂ ವ್ಯರ್ಥವಾಯಿತು. ನಾನು ಜಮಾಅತ್‌ಗೆ ಸೇರಿದಾಗಿನಿಂದ ಚಂದ ಮತ್ತು ಇತರ ಜಮಾಅತ್‌ನ ಚಟುವಟಿಕೆಗಳು, ಉಪದೇಶ ಇತ್ಯಾದಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೇನೆ ಎಂದು ಹೇಳುತ್ತಾರೆ. ಹೀಗೆ ಈಗ ಅವರು ಎರಡು ಕಡೆ ಕೆಲಸ ಮಾಡುತ್ತಿದ್ದಾರೆ. ನಿರುದ್ಯೋಗ ಇತ್ತು ವಾಸಕ್ಕೆ ಕಷ್ಟಕರವಾದ ಪರಿಸ್ಥಿತಿ ಇತ್ತು ಮನೆ ಕೂಡ ಇರಲಿಲ್ಲ. ಈಗ ಗಟ್ಟಿ ಮನೆಯನ್ನೂ ಕಟ್ಟಿಕೊಂಡಿದ್ದಾರೆ. ಜಮಾಅತ್ ಅವರಿಗೆ ಸಹಾಯ ಮಾಡಿದೆ ಎಂದು ಜನರು ಹೇಳುತ್ತಾರೆ. ಪ್ರತಿಕ್ರಿಯೆಯಾಗಿ, ಅವರು ಈ ಜಮಾಅತ್ ಸಹಾಯ ಮಾಡಲಿಲ್ಲ, ಆದರೆ ಅಲ್ಲಾಹನು ಚಂದೆಗಳ ಅನುಗ್ರಹದಿಂದ ನನಗೆ ಸಹಾಯ ಮಾಡಿದ್ದಾನೆ ಎಂದು ಅವರು ಹೇಳುತ್ತಾರೆ.

ಇಂಡೋನೇಷ್ಯಾದ ಅಮೀರ್ ಸಾಹಿಬ್ ಬರೆಯುತ್ತಾರೆ: ಒಬ್ಬ ಅಹ್ಮದಿ ಇದ್ದಾರೆ. ಅವರ ಬಳಿ ಕಾರ್ಖಾನೆ ಇದೆ. ಕೆಲಸಗಳು ಸರಿಯಾಗಿ ನಡೆಯುತ್ತಿರಲಿಲ್ಲ. ಕಳೆದ ವರ್ಷ ನಾನು ತೆಹ್ರೀಕ್ ಜದೀದ್‌ನ ಬಗ್ಗೆ ಕೆಲವು ಘಟನೆಗಳನ್ನು ಪ್ರಸ್ತಾಪಿಸಿದಾಗ ಮತ್ತು ಹೊಸ ವರ್ಷವನ್ನು ಘೋಷಿಸಿದಾಗ, ಅದು ಅವರ ಮೇಲೆ ಉತ್ತಮ ಪರಿಣಾಮ ಬೀರಿತು, ಬಹಳ ಆಳವಾದ ಪರಿಣಾಮ ಬೀರಿತು. ಕಳೆದ ವರ್ಷಕ್ಕೆ ಹೋಲಿಸಿದರೆ ತೆಹ್ರೀಕ್ ಜದೀದ್‌ಗೆ ತಕ್ಷಣವೇ ಎರಡು ವಾಗ್ದಾನಗಳನ್ನು ಬರೆದರು ಮತ್ತು ತಕ್ಷಣವೇ ಈ ವಾಗ್ದಾನವನ್ನು ಪೂರೈಸಿದರು. ಒಂದು ವಾರದ ನಂತರ ಅಲ್ಲಾಹನು ಅವರನ್ನು ಅನುಗ್ರಹಿಸಿದನು ಮತ್ತು ಅವರ ಮರಾಟವು ಹೆಚ್ಚಾಗತೊಡಗಿತು. ಹೀಗಾಗಿ ಹಿಂದೆ ವ್ಯವಹಾರವನ್ನು ಮುಚ್ಚಿದ ಕಂಪನಿಯು ಹಿಂತಿರುಗಿ ದೊಡ್ಡ ಖರೀದಿಯ ಪ್ರಸ್ತಾಪವನ್ನು ಮಾಡಿದೆ. ಈ ವರ್ಷ ನನ್ನ ಕಂಪನಿಯ ಆದಾಯವು ಹಿಂದಿನ ವರ್ಷಗಳಿಗಿಂತ ಅನೇಕ ಪಟ್ಟು ಹೆಚ್ಚಾಗಿದೆ ಎಂದು ಅವರು ಹೇಳುತ್ತಾರೆ.

ಜರ್ಮನಿಯಿಂದ ಮುಬಲ್ಲಿಗ್ ಫರ್ಹಾದ್ ಅಹ್ಮದ್ ಸಾಹೇಬರು ಬರೆಯುತ್ತಾರೆ: ವೈಸ್‌ಬಾಡೆನ್‌ನ ಮಹಿಳೆಯೊಬ್ಬರನ್ನು ತನ್ನ ಕೆಲಸದಿಂದ ವಜಾಗೊಳಿಸಲಾಯಿತು. ಆಮದ್ದು ಕೂಡ ನಿಂತು ಹೋಯಿತು. ಅವಳು ತನ್ನ ಗಂಡನನ್ನು ಕರೆಯಬೇಕಾಗಿತ್ತು, ಅವಳು ಸ್ಪಾನ್ಸರ್ ಮಾಡಲು ಸಾಧ್ಯವಾಗಲಿಲ್ಲ. ಅಣ್ಣನ ಬಳಿ ಇದರ ಬಗ್ಗೆ ಪ್ರಸ್ತಾಪಿಸಿದಾಗ ಅವರು ಹೇಳಿದರು ಈಗ ಕೇವ ದುಆ ಮಾಡುವುದು ಹಾಗೂ ಚಂದ ನೀಡುವುದು ಮಾತ್ರ ಪರಿಹಾರವಾಗಿದೆ ಎಂದು ಹೇಳಿದರು. ಆರ್ಥಿಕ ತ್ಯಾಗ ಮಾಡಿ. ಅವರು ತಮ್ಮ ಆಭರಣಗಳನ್ನು ಮಾರಿ ಚಂದ ತೆಹ್ರೀಕ್ ಜದೀದ್ ಅನ್ನು ಪಾವತಿಸಿದರು. ನಾಲ್ಕು ದಿನಗಳ ನಂತರ, ಕೆಲಸಗಾರರಿಂದ ನಿಮಗೆ ಖಾಯಂ ಕೆಲಸ ನೀಡಲಾಗುತ್ತದೆ ಮತ್ತು ಸಂಬಳ ಎರಡು ಸಾವಿರ ಯುರೋಗಳು ಎಂದು ಸಂದೇಶ ಬಂದಿತು. ಅದರೊಂದಿಗೆ ಅವರು ತನ್ನ ಗಂಡನನ್ನು ಸಹ ಸ್ಪಾನ್ಸರ್ ಮಾಡಬಹುದಾಯಿತು.

ಭಾರತದ ವಕೀಲುಲ್ ಮಾಲ್ ಹೇಳುತ್ತಾರೆ: ಇಲ್ಲಿ ಒಬ್ಬರು ತಹ್‌ರೀಕ್ ಜದೀದ್ ಚಂದ ನೀಡುವುದರಲ್ಲಿ ಮುಂಚೂಣಿಯಲ್ಲಿರುತ್ತಾರೆ. ಅವರೊಂದಿಗೆ ಚಂದವನ್ನು ವರ್ಧಿಸಬೇಕೆಂದು ಹೇಳಿದಾಗ ಅವರು ಕೇಳಿದರು ಎಷ್ಟು ವರ್ಧಿಸಲಿ. ನಿಮಗೆ ಸಾಧ್ಯವಿರುವಷ್ಟು ವರ್ಧಿಸಿರಿ ಎಂದು ಅವರೊಂದಿಗೆ ಹೇಳಲಾಯಿತು. ಆಗ ಅವರು ಹೇಳಿದರು: ಕೇಂದ್ರದ ಪ್ರತಿನಿಧಿಯಾದ ವ್ಯಕ್ತಿ ಸ್ವತಃ ಹೇಳಬೇಕು ಎಷ್ಟು ವರ್ಧಿಸಬೇಕೆಂದು. ಆಗ ಕೇಂದ್ರದ ಪ್ರತಿನಿಧಿ ಹೇಳಿದರು: ಹತ್ತು ಲಕ್ಷ ರೂಪಾಯಿಯಷ್ಟು ವರ್ಧಿಸಿರಿ. ಆ ವ್ಯಕ್ತಿ ಐದು ಲಕ್ಷ ರೂಪಾಯಿ ಚಂದ ಅದರ ಮೊದಲು ನೀಡಿದ್ದರು. ಆದರೂ ಅವರು ವರ್ಧನೆ ಮಾಡಿ ಪಾವತಿ ಸಹ ಮಾಡಿದರು. ಆ ವ್ಯಕ್ತಿ ಹೇಳುತ್ತಾರೆ: ನನ್ನ ಒಂದು ಕಟ್ಟಡದ ರಿಜಿಸ್ಟ್ರೇಶನ್ ಆಗುತ್ತಾ ಇರಲಿಲ್ಲ. ನನಗೆ ಬಹಳ ದೊಡ್ಡ ನಷ್ಟ ಸಂಭವಿಸುವ ಸಾಧ್ಯತೆಗಳಿದ್ದುವು. ಆದರೆ ತಹ್‌ರೀಕ್ ಜದೀದ್ ಚಂದ ವರ್ಧಿಸಿ ನೀಡಿದ ನಂತರ ಕೆಲವು ದಿನಗಳಲ್ಲಿ ಈ ಕೆಲಸ ಈಡೇರಿತು. ಈ ರೀತಿ ಅಲ್ಲಾಹನು ಆ ವ್ಯಕ್ತಿಗೆ ಸ್ಥಗಿತಗೊಂಡ ಕೆಲಸವನ್ನು ಈಡೇರಿಸಿಕೊಟ್ಟು ನಷ್ಟವಾಗದಂತೆ ಮಾಡಿದನು. ಇದರಿಂದ ಸ್ಪಷ್ಟವಾಗುವುದೇನೆಂದರೆ ಅಲ್ಲಾಹನು ಬಡವರು ನೀಡಿದ ಸಾಲವನ್ನೂ ಶ್ರೀಮಂತರು ನೀಡಿದ ಸಾಲವನ್ನೂ ಮರುಪಾವತಿ ಮಾಡದೆ ಇರುವುದಿಲ್ಲ. ಪ್ರತಿಯೊಬ್ಬನಗೆ ಅವನು ಅನುಗ್ರಹ ನೀಡುತ್ತಾನೆ.

ಭಾರತದ ವಕೀಲುಲ್ ಮಾಲ್ ಸಾಹಿಬ್ ಹೀಗೆ ಸಹ ಬರೆದಿದ್ದಾರೆ: ಕಾಶ್ಮೀರದ ಒಬ್ಬ ಡಾಕ್ಟರ್ ಶೇರೆ ಕಾಶ್ಮೀರ್ ಯುನಿವರ್ಸಿಟಿಯಲ್ಲಿ ಪ್ರೊಫೆಸರ್ ಆಗಿದ್ದಾರೆ. ಅವರು ತಮ್ಮ ಚಂದ ನೀಡಿದ್ದರು. ಅವರು ಹೇಳುತ್ತಾರೆ: ನನಗೆ ಬಡ್ತಿ ನೀಡಿ ನನ್ನನ್ನು ಚೀಫ್ ಸೈಯನ್‌ಟಿಸ್ಟ್ ಆಗಿ ನೇಮಿಸಲಾಯಿತು. ನನ್ನ ಸಂಬಳ ಸಹ ಅಸಾಧಾರಣವಾಗಿ ವರ್ಧಿಸಲಾಗಿದೆ. ಆ ಕಾರಣದಿಂದ ಅವರು ತಹ್‌ರೀಕ್ ಜದೀದ್ ಚಂದ ಸಹ ವರ್ಧಿಸಿದರು.

ಮಾರಿಶಿಯಸ್ಸಿನ ಮಹಿಳೆಯೊಬ್ಬಳು ಹೇಳುತ್ತಾಳೆ: ಕಳೆದ ವರ್ಷ ತಹ್ರೀಕ್ ಜದೀದಿಗೆ ಸಂಬಂಧಪಟ್ಟು ಸಂಬಂಧಿಕರ ಕೆಲವು ಘಟನೆಗಳನ್ನು ಆಲಿಸಿದ ನಂತರ ನನ್ನ ಪತಿ ಹೇಳಿದರು: ಪಾವತಿಸಲು ಸ್ವಲ್ಪ ಕಷ್ಟಕರವಾಗುವಷ್ಟು ಚಂದಾದ ವಾಗ್ದಾನವನ್ನು ಬರೆಸಬೇಕು. ಹೀಗೆ 75 ಸಾವಿರ ಮಾರಿಶಿಯಸ್ ರೂಪಾಯಿ ವಾಗ್ದಾನವಾಗಿ ಬರೆಸಲಾಯಿತು. ಆ ಸಮಯದಲ್ಲಿ ನನ್ನ ಪತಿ ಒಂದು ಮೆಡಿಕಲ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು. ಕಳೆದ ಮೂರು ವರ್ಷಗಳಿಂದ ಸಂಬಳದಲ್ಲಿ ಸಾಧಾರಣವಾದ ವರ್ಧನೆಯುಂಟಾಗಿತ್ತು. ಆದರೆ ಅವರು ವಾಗ್ದಾನವನ್ನು ಬರೆಸಿದಾಗ ಒಂದು ಪ್ರೈವೇಟ್ ಹಾಸ್ಪಿಟಲಲ್ಲಿ ನೌಕರಿಯ ಆಫರ್ ಬಂತು. ಅದೇ ದಿನಗಳಲ್ಲಿ ನನ್ನ ಪತಿ ತನ್ನ ತಾಯಿಗೆ ಒಂದು ಸಾವಿರ ರೂಪಾಯಿ ಕೊಡುಗೆಯಾಗಿಯೂ ನೀಡಿದ್ದರು. ನೌಕರಿಗಾಗಿ ಇಂಟರ್‌ವ್ಯೂ ನೀಡಬೇಕಾಗಿತ್ತು. ಹೀಗೆ ಇಂಟರ್‌ವ್ಯೂ ನಡೆಯಿತು ಮತ್ತು ಅವರಿಗೆ ನೌಕರಿ ಲಭಿಸಿತು. ಅದು 76 ಸಾವಿರ ಸಂಬಳದ ನೌಕರಿಯಾಗಿತ್ತು. 75 ಸಾವಿರದ ವಾಗ್ದಾನ ಮಾಡಲಾಗಿತ್ತು ಮತ್ತು ಒಂದು ಸಾವಿರ ತಾಯಿಗೆ ಕೊಟ್ಟಿದ್ದರು. ಅದನ್ನು ಕೂಡ ಅಲ್ಲಾಹನು ಮರಳಿಸಿದನು.

ಬಾಂಗ್ಲಾದೇಶದ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ: ಇಲ್ಲಿ ಕರೋನಾ ಸಾಂಕ್ರಾಮಿಕ ಸಮಯದಲ್ಲಿ ಇಲ್ಲಿನ ಒಬ್ಬ ಸಂಭಾವಿತ ವ್ಯಕ್ತಿ ಬಹಳಷ್ಟು ಹಾನಿವುಂಟಾಯಿತು. ಚಂದಗಳು ಬಹಳಷ್ಟು ಬಾಕಿ ಉಳಿದಿದ್ದವು. ತೆಹ್ರೀಕ್ ಜದೀದ್ ಇತ್ಯಾದಿಗಳ ಚಂದದ ಬಗ್ಗೆ ನೆನಪಿಸಿದಾಗ, ಅವರು ತಮ್ಮ ಹೆಂಡತಿಯ ಉಳಿತಾಯದಿಂದ 11,500 ಟಾಕಾವನ್ನು ಪಾವತಿಸಿದರು, ಆದರೆ ಅರ್ಧದಷ್ಟು ಬಾಕಿ ಉಳಿದಿತ್ತು. ಆದರೆ, ಈ ತಿಂಗಳ ಕೊನೆಯಲ್ಲಿ ಪತ್ನಿಯು ಬಾಕಿ ಇರುವ ಚಂದದ ಮೊತ್ತವನ್ನು ಪಡೆದುಕೊಳ್ಳಿ ಎಂದು ಹೇಳಿದರು. ನಮ್ಮ ತಂಡವು ಅವರ ಬಳಿ ತಲುಪಿದಾಗ ವಾಗ್ದಾನ ಮಾಡಿರುವುದಕ್ಕಿಂತ ಮೂರು ಪಟ್ಟು ಹೆಚ್ಚು ಮೊತ್ತವನ್ನು ಪಾವತಿಸಿದರು ಮತ್ತು ಕಡ್ಡಾಯ ಚಂದದ ಮೊತ್ತದ ಬಾಕಿಯನ್ನು ಸಹ ಪಾವತಿಸಿದರು ಜೊತೆಗೆ ದೀರ್ಘಾವಧಿಯ ಆಸೆಯನ್ನು ಅಲ್ಲಾಹನು ಪೂರೈಸಿದ ಶುಭ ಸುದ್ದಿಯನ್ನು ಸಹ ಹಂಚಿಕೊಂಡರು. ಅವರು ಬಹಳ ದಿನಗಳಿಂದ ಮನೆಗಾಗಿ ಜಮೀನು ಹುಡುಕುತ್ತಿದ್ದರು. ಅವರು ಚಂದ ನೀಡಲು ಪ್ರಾರಂಭಿಸಿದಾಗಿನಿಂದ, ಅಲ್ಲಾಹನು ಅವರನ್ನು ಅದ್ಭುತ ರೀತಿಯಲ್ಲಿ ಮನೆ ನಿರ್ಮಿಸಲು ನಿವೇಶನವನ್ನು ಖರೀದಿಸಲು ಅನುವು ಮಾಡಿಕೊಟ್ಟನು. ಆದಾಯವೂ ಹೆಚ್ಚಿತು, ಚಂದವನ್ನೂ ನೀಡಲಾಯಿತು ಮತ್ತು ಸರ್ವಶಕ್ತನಾದ ಅಲ್ಲಾಹನು ಆಸ್ತಿಯನ್ನು ನಿರ್ಮಿಸುವ ಅವಕಾಶವನ್ನು ನೀಡಿದನು.

ಬುರ್ಕಿನಾ ಫಾಸೊದಿಂದ ಸ್ನೇಹಿತವೋರ್ವರಿದ್ದಾರೆ. ಶಿಕ್ಷಕ ವೃತ್ತಿಯಲ್ಲಿದ್ದಾರೆ. ಕಾರು ಖರೀದಿಸಲು ಸಾಧ್ಯವಾದಾಗ ಅವರ ಇತರ ಶಿಕ್ಷಕರು ನಾವೂ ಶಿಕ್ಷಕರೇ, ಅದನ್ನು ಖರೀದಿಸಲು ಸಾಧ್ಯವಿಲ್ಲ ಎಂದು ಹೇಳಿದರು. ಜಮಾಅತ್ ಖಂಡಿತವಾಗಿಯೂ ಸಹಾಯ ಮಾಡಿರಬಹುದು ಎಂದು ಅವರೆಲ್ಲರು ಹೇಳಿದರು. ಅದಕ್ಕೆ ನಾನು ಜಮಾಅತ್ ಸಹಾಯ ಮಾಡಲಿಲ್ಲ ಎಂದು ಹೇಳಿದೆ ಎನ್ನುತ್ತಾರೆ. ಅಲ್ಲಾಹನು ನನಗೆ ಚಂದದಲ್ಲಿ ನೀಡಿದ ಸ್ವಲ್ಪ ಹಣದ ಕಾರಣದಿಂದ ನನ್ನ ಸಂಪತ್ತನ್ನು ಅನುಗ್ರಹಿಸಿದನು. ನಾನು ವಿದ್ಯಾರ್ಥಿಯಾಗಿದ್ದಾಗಿನಿಂದ ಚಂದ ನೀಡುವ ಅಭ್ಯಾಸವನ್ನು ಹೊಂದಿದ್ದೇನೆ ಮತ್ತು ಸರ್ವಶಕ್ತನಾದ ಅಲ್ಲಾಹನು ಯಾವಾಗಲೂ ನನ್ನನ್ನು ಅನುಗ್ರಹಿಸುತ್ತಾನೆ ಎಂದು ಅವರು ಹೇಳುತ್ತಾರೆ.

ಜರ್ಮನಿಯ ಓಸ್ನಾಬ್ರೂಕ್‌ನ ಓರ್ವ ಸದಸ್ಯರಾಗಿದ್ದಾರೆ: ಅವರು ಬರೆಯುತ್ತಾರೆ ತೆಹ್ರೀಕ್ ಜದೀದ್‌ನ ಕುರಿತು ಸಭೆ ನಡೆಸಲಾಯಿತು. ಅವರು ಹೇಳುತ್ತಾರೆ: ನಾನು ಹೆಚ್ಚುವರಿ ಪಾವತಿಸಲು ಐದು ನೂರು ಯುರೋಗಳನ್ನು ತಂದಾಗ, ಅವರ ಬಳಿ ರಶೀದಿ ಪುಸ್ತಕ ಮುಗಿದಿದೆ ಎಂದು ಹೇಳಿದರು. ಹಾಗಾಗಿ ನಾನು ಹಿಂದಿರುಗಿ ತನ್ನ ಕೆಲಸದವನಿಗೆ ಹಣ ನೀಡಬೇಕಾಗಿತ್ತು ಅವನಿಗೆ ನೀಡಿದೆ. ಅದೇ ರಾತ್ರಿ ಅವರು ನನ್ನನ್ನು ಕನಸಿನಲ್ಲಿ ನೋಡಿದರು. ಅವರು ಹೇಳುತ್ತಾರೆ: ನಾನು ಅವರನ್ನು ಹೇಳುತ್ತಿದ್ದೇನೆ. ನನಗೆ ಐದು ಸಾವಿರ ಯುರೋಗಳು ಬೇಕು ಎಂದು ನಾನು ಈ ವ್ಯಕ್ತಿಗೆ ಹೇಳುತ್ತಿದ್ದೇನೆ. ಅವರು ಹೇಳುತ್ತಾರೆ, ನನಗೆ ಅರ್ಥವಾಗಿದೆ, ಇದರರ್ಥ ತೆಹ್ರೀಕ್ ಜದೀದ್ ಚಂದವಾಗಿದೆ ಎಂದು. ಅವರು ತನ್ನ ಪತ್ನಿಗೆ ಈ ಕನಸನ್ನು ವಿವರಿಸಿದಾಗ ಅವರು ಹೇಳಿದರು ತೆಹ್ರೀಕ್ ಜದೀದ್‌ನಲ್ಲಿ ಐದು ಸಾವಿರ ಯುರೋಗಳನ್ನು ಪಾವತಿಸೋಣ. ಅವರು ಹೇಳುತ್ತಾರೆ: ಇದರಿಂದಾಗಿ ಸ್ವಲ್ಪ ಸಮಯದ ನಂತರ ಕರೋನಾ ಹೆಲ್ಪ್‌ನಲ್ಲಿ ಇಪ್ಪತ್ತೆರಡು ಸಾವಿರಕ್ಕೂ ಹೆಚ್ಚು ಮೊತ್ತವು ನನ್ನ ಖಾತೆಗೆ ಬಂದಿತು. ಇದರ ಬಗ್ಗೆ ನನಗೆ ಭ್ರಮೆಯೂ ಇರಲಿಲ್ಲ.

ಕೆನಡಾದ ಓರ್ವ ಲಜ್ನಾ ಸದಸ್ಯೆ ಹೇಳುತ್ತಾರೆ: ಅವರು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದರು. ನಾನು ನನ್ನ ಭರವಸೆಯನ್ನು ಹೇಗೆ ಪೂರೈಸುತ್ತೇನೆ ಎಂದು ನಾನು ತುಂಬಾ ಚಿಂತೆ ಮಾಡುತ್ತಿದ್ದೆ. ಅವರು ತುಂಬಾ ಚಿಂತಿತರಾಗಿದ್ದರು, ದುಆ ಅಹ ಮಾಡುತ್ತಿದ್ದರು. ನನ್ನ ಉದ್ದೇಶವು

ಸಹ ಚೆನ್ನಾಗಿತ್ತು. ಚಂದಾ ನೀಡಲು ನನಗೆ ಯಾವ ಕುರುಹುಗಳು ಗೋಚರಿಸುತ್ತಿರಲಿಲ್ಲ. ನಾನು ತುಂಬಾ ದುಆ ಮಾಡಿದೆ. ನಂತರ ಏನಾಯಿತು, ಅವರು ಹೇಳುತ್ತಾರೆ ಒಂದು ರಾತ್ರಿ ನನ್ನ ಮಗಳು ಅವಳ ಜನ್ಮ ಪ್ರಮಾಣಪತ್ರವನ್ನು ಹುಡುಕುತ್ತಿದ್ದಳು ಅಲ್ಲಿ ಅವಳಿಗೆ ಹಳೆಯ ಕೈಚೀಲ ಸಿಕ್ಕಿತು. ಅವರು ಹೇಳುತ್ತಾರೆ ನಾನು ಎಂಟು ವರ್ಷಗಳ ಹಿಂದೆ ಅಮೇರಿಕಾಕ್ಕೆ ಹೋಗಿದ್ದೆ, ಅಮೇರಿಕಾಕ್ಕೆ ಹೋಗುವುದಕ್ಕಿಂತ ಸ್ವಲ್ಪ ಸಮಯದ ಮೊದಲು, ನಾನು ಖರ್ಚು ಮಾಡಲು ಸ್ವಲ್ಪ ಹಣವನ್ನು ಅಲ್ಲಿ ಇರಿಸಿದ್ದನ್ನ ನನಗೆ ಮರೆತು ಹೋಗಿತ್ತು. ತದನಂತರ ಆ ಹಣ ತೆಗೆದು ನೋಡಿದರೆ ಅದು ಸರಿಯಾಗಿ ಕೊಡಬೇಕಾದ ಮೊತ್ತವೇ ಆಗಿತ್ತು. ಹೀಗೆ ಅಲ್ಲಾಹನು ಈ ರೀತಿಯಲ್ಲೂ ಸಹಾಯ ಮಾಡುತ್ತಾನೆ.

ಗಿನಿಕನಾಕರಿಯ ಸದರ್ ಸಾಹಿಬ್ ಬರೆಯುತ್ತಾರೆ: ಬಡ ಅಹ್ಮದಿ ಮಹಿಳೆ ಇದ್ದಾರೆ. ಸಣ್ಣಪುಟ್ಟ ವಸ್ತುಗಳನ್ನು ಮಾರಾಟ ಮಾಡಿ ಜೀವನ ಸಾಗಿಸುತ್ತಾಳೆ. ಅಶ್ರಃ ತೆಹ್ರೀಕ್ ಜದೀದ್ ಆಯೋಜಿಸಿದ ಸಂದರ್ಭದಲ್ಲಿ ನಾವು ಅವರ ಮನೆಗೆ ತಲುಪಿದಾಗ ಮತ್ತು ತೆಹ್ರೀಕ್ ಜದೀದ್ ಚಂದವನ್ನು ನೀಡಲು ಈ ಮಹಿಳೆಯತ್ತ ಗಮನ ಹರಿಸಿದಾಗ, ಅವರು ಈಗ ಈ ಸಣ್ಣ ಮೂಲದಿಂದ ತುಂಬಾ ಚಿಂತಿತರಾಗಿದ್ದಾರೆ ಎಂದು ಹೇಳಲು ಪ್ರಾರಂಭಿಸಿದರು. ಆದಾಯವು ಕೂಡ ಇಲ್ಲ. ಸಾಲ ಮಾಡಿ ವ್ಯಾಪಾರ ಆರಂಭಿಸಿದ್ದೇನೆ. ಆದಾಯವು ಅಸ್ತಿತ್ವದಲ್ಲಿಲ್ಲ. ಸಾಲ ತೀರಿಸಲೂ ಆಗುತ್ತಿಲ್ಲ. ಆದಾಗ್ಯೂ, ಅವರಿಗೆ ತಹ್ರೀಕ್ ಜದೀದ್ ಬಗ್ಗೆ ವಿವರಿಸಲಾಯಿತು ಮತ್ತು ದುಆ ಕೂಡ ಮಾಡಲು ಹೇಳಿದೆವು. ತ್ನಂತರ ಆ ಮಹಿಳೆ ಇಪ್ಪತ್ತು ಸಾವಿರ ಫ್ರಾಂಕ್ಗಳನ್ನು ದಾನ ಮಾಡಿದರು, ಅವರ ಬಳಿ ಇದ್ದ ಒಟ್ಟು ಮೊತ್ತವನ್ನು ನೀಡಿದರು. ಪರಿಸ್ಥಿತಿಯೊಂದಿಗೆ ಹೋರಾಡುತ್ತಿದ್ದ ಬಡ ಮಹಿಳೆಗೆ ಇದು ದೊಡ್ಡ ಮೊತ್ತವಾಗಿದೆ. ಕೆಲವು ದಿನಗಳ ನಂತರ, ನಮ್ಮ ಮಿಷನರಿಗಳು ಮತ್ತೊಮ್ಮೆ ಕೆಲವು ಕೆಲಸದ ನಿಮಿತ್ತ ಈ ಮಹಿಳೆಯನ್ನು ಭೇಟಿಯಾಗಲು ಹೋದಾಗ. ಅವಳು ಅವರನ್ನು ಭೇಟಿಯಾದಾಗ, ಆ ಮಹಿಳೆಯು ನನ್ನ ಎಲ್ಲಾ ಸಮಸ್ಯೆಗಳನ್ನು ಸರ್ವಶಕ್ತನಾದ ಅಲ್ಲಾಹನು ಪರಿಹರಿಸಿದ್ದಾನೆ ಎಂದು ಭಾವನೆಗಳಿಂದ ತುಂಬಿದ ಧ್ವನಿಯಲ್ಲಿ ಸಂತೋಷದಿಂದ ಹೇಳಿದಳು. ನನ್ನ ಸಣ್ಣ ವ್ಯಾಪಾರ ಈಗ ಬಹಳ ಚೆನ್ನಾಗಿ ನಡೆಯುತ್ತಿದೆ. ನನ್ನ ಸಾಲವೂ ತೀರಿಸಲಾಗಿದೆ ಮತ್ತು ಈ ಆರ್ಥಿಕ ತ್ಯಾಗದಿಂದ ಇದೆಲ್ಲವೂ ಆಗಿದೆ ಎಂದಳು.

ತಾತಾರಿಸ್ತಾನ್ ರಶ್ಯದ ಸ್ನೇಹಿತೋರ್ವರು ಫರೀದ್ ಇಬ್ರಾಹೀಮೋ ಇದ್ದಾರೆ. ಅವರು ಹೇಳುತ್ತಾರೆ ಕಳೆದ ವರ್ಷದ ಬೇಸಿಗೆಯಲ್ಲಿ ನನ್ನ ಫೋನ್‌ನೊಂದೆ ಏನೋ ವಿಚಿತ್ರವಾದ ಘಟನೆಯು ಸಂಭವಿಸಿತು. ಅವರು ಹೇಳುತ್ತಾರೆ, ನನ್ನ ಆನ್‌ಲೈನ್ ಬ್ಯಾಂಕ್ ಖಾತೆಯಲ್ಲಿ ನನ್ನ ಪ್ರಯಾಣಿಕರಿಂದ ಹಣವನ್ನು ಸ್ವೀಕರಿಸಿದ ನಂತರ, ಹಣಕಾಸಿನ ಚಂದಗಳ ಬಗ್ಗೆ ಖಲೀಫ್ ವಕ್ತ್ ಅವರ ಖುತ್ಬಾವನ್ನು ನನ್ನ ಸ್ಮಾರ್ಟ್ ಫೋನ್‌ನಲ್ಲಿ ಸ್ವಯಂಚಾಲಿತವಾಗಿ ಪ್ಲೇ ಆಯಿತು. ಇದು ಒಮ್ಮೆ ಆಗಲಿಲ್ಲ ಎಂದು ಅವರು ಹೇಳುತ್ತಾರೆ, ಆದರೆ ನನ್ನ ಖಾತೆಗೆ ದೊಡ್ಡ ಮೊತ್ತವನ್ನು ವರ್ಗಾಯಿಸಿದಾಗ, ಈ ರೀತಿಯ ಏನಾದರೂ ಸಂಭವಿಸುತ್ತದೆ. ಸರ್ವಶಕ್ತನಾದ ಅಲ್ಲಾಹನು ತನ್ನ ಅಸ್ತಿತ್ವದ ಪುರಾವೆಯನ್ನು ನೀಡುವಾಗ ನನಗೆ ನೆನಪಿಸುತ್ತಿದೆ ಎಂದು ನಾನು ಅರ್ಥವಾಡಿಕೊಂಡಿದ್ದೇನೆ. ಹಝ್ರತ್ ಮಸೀಹ್ ಮಹೌಊದ್ ಅಲೈಹಿಸ್ಸಲಾಮ್ ಅವರ ಜಮಾಅತ್ ಅನ್ನು ಸೇರುವ ಮೂಲಕ ನಾನು ಆರ್ಥಿಕ ತ್ಯಾಗವನ್ನು ಮಾಡಲು ಸಮರ್ಥನಾಗಿರುವುದು ನನಗೆ ದೊಡ್ಡ ಗೌರವವಾಗಿದೆ. ಆದ್ದರಿಂದ ಅವರ ಫೋನ್‌ನಲ್ಲಿ ಸ್ವಯಂಚಾಲಿತವಾಗಿ ಧರ್ಮೋಪದೇಶ ಅಥವಾ ಸಂದೇಶವು ಬರುತ್ತದೆ, ಅದು ಅವರನ್ನು ದಾನ ಮಾಡಲು ಪ್ರೇರೇಪಿಸುತ್ತದೆ.

ತನ್ಸಾನಿಯದ ನಿಷ್ಠಾವಂತ ಮಹಿಳೆಯೊಬ್ಬಳು ಹೇಳುತ್ತಾಳೆ: ಜಲ್ಸದಿಂದ ಮರಳಿ ಹೋಗುವಾಗ ತಹ್ರೀಕ್ ಜದೀದ್ ಚಂದ ಬಾಕಿಯಿರುವುದಾಗಿ ನೆನಪಿಗೆ ಬಂತು. ಯಾವುದೇ ಮಾರ್ಗ ತೋಚುತ್ತಿರಲಿಲ್ಲ. ಒಬ್ಬ ವ್ಯಕ್ತಿ ಅವಳಿಂದ ಸಾಲ ಪಡೆದಿದ್ದನು. ಸಾಲ ಮರಳಿ ಲಭಿಸಿದರೆ, ಚಂದಾ ಕೊಡಲು ಯೋಚಿಸಿದ್ದಳು. ಆದರೆ ಅವನು ಉತ್ತರಿಸುತ್ತಿರಲಿಲ್ಲ. ಫೋನ್ ಕರೆಗೆ ಜವಾಬು ನೀಡುತ್ತಿರಲಿಲ್ಲ. ರೋಗಿಯೂ ಆಗಿದ್ದಳು. ಮಾತ್ರೆಗಳ ಖರ್ಚು ವರ್ಧಿಸುತ್ತಿತ್ತು. ಮಕ್ಕಳ ಸ್ಕೂಲ್ ಫೀಸ್ ಬಗ್ಗೆಯೂ ಚಿಂತಿತಳಾಗಿದ್ದಳು. ದುಆ ಮಾಡಲು ಮಕ್ಕಳೊಡನೆ ಹೇಳಿದಳು. ಅದೇ ವೇಳೆ ಅಧ್ಹಾನಿನ ಶಬ್ದ ಕೇಳಿಬಂತು. ನಮಾಝಿಗಾಗಿ ಹೋಗೋಣ ಮತ್ತು ಅಲ್ಲಾಹನಲ್ಲಿ ಬೇಡೋಣವೆಂದು ಮಕ್ಕಳು ಹೇಳಿದರು. ಈ ರೀತಿಯಾಗಿ ಅಲ್ಲಾಹನು ಮಕ್ಕಳ ವಿಶ್ವಾಸವನ್ನು ಕೂಡ ಸುದೃಢಗೊಳಿಸುತ್ತಾನೆ. ನಮ್ಮ ದುಆವನ್ನು ಸ್ವೀಕರಿಸಿಕೊಂಡು ಸಾಲಗಾರನಿಗೆ ಅದನ್ನು ಮರಳಿ ಕೊಡಲು ಮನಸ್ಸು ಬರುವಂತೆ ಅಲ್ಲಾಹನು ಮಾಡಬಹುದು ಎಂದು ಹೇಳಿದರು. ಹೀಗೆ ತಾಯಿ ಮತ್ತು ಮಕ್ಕಳು ವುಝೂ ಮಾಡಿಕೊಂಡು ನಮಾಝಿನಲ್ಲಿ ಅಲ್ಲಾಹನಲ್ಲಿ ಬೇಡಿಕೊಂಡರು. ನಮಾಝ್ ಮುಗಿಸುವುದಕ್ಕೆ ಮುಂಚಿತವಾಗಿಯೇ ಫೋನ್ ಕರೆ ಬಂತು. ಅದು ಸಾಲಗಾರನ ಫೋನ್ ಕರೆಯಾಗಿತ್ತು. ಅವನು ಹೇಳಿದನು: ನಾನು ನಿಮ್ಮ ಮನೆಯ ಬಾಗಿಲ ಹೊರಗೆ ನಿಂತಿದ್ದೇನೆ. ನಿಮ್ಮ ಹಣವನ್ನು ಮರಳಿಸಲು ಬಂದಿದ್ದೇನೆ. ಅವನು ಹೇಳಿದನು: ನಾನು ಬಸ್ ಸ್ಟಾಪಿನಲ್ಲಿ ನಿಂತು ಬಸಿಗಾಗಿ ಕಾಯುತ್ತಿದ್ದೆ. ಅಧ್ಹಾನಿನ ಕರೆ ಕೇಳಿಬಂತು. ಮೊದಲು ಸಾಲದ ಹಣವನ್ನು ಮರಳಿಸು ಎಂದು ಹೇಳಿದಂತೆ ನನಗೆ ತೋಚಿತು. ಆದ್ದರಿಂದ ಹಣವನ್ನು ಮರಳಿಸಲು ಬಂದಿದ್ದೇನೆ. ಈ ಪೂರ್ತಿ ಘಟನೆಯನ್ನು ಕೇಳಿದಾಗ, ಅವರ ಹೃದಯಗಳು ಅಲ್ಲಾಹನ ಸ್ತುತಿಗಾನದಲ್ಲಿ ತುಂಬಿದುವು. ಮಕ್ಕಳು ಹೇಳಿದರು: ಅಲ್ಲಾಹನಿಗೆ ಸರ್ವಸ್ತುತಿ, ನಾವು ನಮಾಝ್ ನಿರ್ವಹಿಸಿದಾಗ ನಮಗೆ ಹಣ ಲಭಿಸಿತು.

ಸೇಂಟ್ ಪೀಟರ್ಸ್‌ಬರ್ಗ್‌ನ ಓರ್ವ ವ್ಯಕ್ತಿ ಇಕ್ರಮ್ ಜಾನ್ ಸಾಹಿಬ್ ಇದ್ದಾರೆ. ಅವರು ಹೇಳುತ್ತಾರೆ ನಾನು ಅಗತ್ಯವಿರುವವರಿಗೆ ಸಹಾಯ ಮಾಡಲು ಮತ್ತು ವಿಶೇಷವಾಗಿ ನನ್ನ ಚಂದಗಳನ್ನು ಪಾವತಿಸಲು ನನ್ನ ಆರ್ಥಿಕ ಸಮೃದ್ಧಿಗಾಗಿ ನಾನು ಯಾವಾಗಲೂ ಪ್ರಾರ್ಥಿಸುತ್ತಿರುತ್ತೇನೆ ಮತ್ತು ಇದು ಯಾವಾಗಲೂ ವಿಚಿತ್ರ ರೀತಿಯಲ್ಲಿ ನಡೆಯುತ್ತದೆ. ಕಳೆದ ಬಾರಿ ಚಂದವನ್ನು ಪಾವತಿಸಲು ಕೊನೆಯ ದಿನವಾಗಿದ್ದಾಗ ನನ್ನ ಬಳಿ ಮೂರು ಸಾವಿರ ರೂಬಲ್ಸ್ ಕಡಿಮೆ ಇತ್ತು. ಕೆಲಸದ ಸಮಯದಲ್ಲಿ, ಇಬ್ಬರು ಇದ್ದಕ್ಕಿದ್ದಂತೆ ನನ್ನ ಬಳಿಗೆ ಬಂದರು, ಅವರಲ್ಲಿ ಒಬ್ಬರು ನನಗೆ ಒಂದು ಸಾವಿರ ಮತ್ತು ಇನ್ನೊನ್ನ ಎರಡು ಸಾವಿರ ರೂಬಲ್ಸ್ಗಳನ್ನು ನೀಡಿದರು. ಹೀಗೆ ನನಗೆ ಹಿಂದೆಂದೂ ಸಂಭವಿಸಲಿಲ್ಲ, ಏಕೆಂದರೆ ಕೆಲಸವು ನನಗೆ ಮುನ್ನೂರರಿಂದ ಐದು ನೂರು ರೂಬಲ್ಸ್ಗಳನ್ನು ನೀಡುತ್ತದೆ. ಈಗ ನಾನು ನನ್ನ ಹೆಚ್ಚುವರಿ ಆದಾಯವನ್ನು ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ನೀಡುತ್ತಿದ್ದೇನೆ.

ಹೀಗೆ ಪರಿಶುದ್ಧ ರೀತಿಯಲ್ಲಿ ಆರ್ಥಿಕ ತ್ಯಾಗ ಮಾಡುವವರನ್ನು ಅಲ್ಲಾಹನು ಹೇಗೆ ಅನುಗ್ರಹಿಸುತ್ತಾನೆ ಎಂಬುದರ ಕುರಿತು ನಾನು ಪ್ರಸ್ತುತಪಡಿಸಿದ ಕೆಲವು ಘಟನೆಗಳಾಗಿವೆ.

ಈಗ ನಾನು ತಹ್ರೀಕ್ ಜದೀದಿನ ಹೊಸ ವರ್ಷದ ಘೋಷಣೆಯನ್ನು ಮಾಡುತ್ತೇನೆ. ತಹ್‌ರೀಕ್ ಜದೀದ್ ಚಂದದ 88ನೇ ವರ್ಷ ಮುಗಿತಾಯವಾಗಿದೆ. ನವೆಂಬರ್ ಒಂದರಿಂದ 89ನೇ ವರ್ಷ ಶುರುವಾಯಿತು.

ಈ ಕಳೆದ ವರ್ಷದಲ್ಲಿ ಜಾಗತಿಕ ಅಹ್ಮದಿಯಾ ಜಮಾಅತಿಗೆ 16.4 ಮಿಲಿಯನ್ ಪೌಂಡ್‌ಗಳ ಸಾಂಪತ್ತಿಕ ತ್ಯಾಗ ಮಾಡುವ ಭಾಗ್ಯ ಗಳಿಸಿದೆ. ಲೋಕದಲ್ಲಿ ಆರ್ಥಿಕ ಪರಿಸ್ಥಿತಿ ವೇಗವಾಗಿ ಬಿಗಡಾಯಿಸುತ್ತಾ ಇದ್ದರೂ ನಮ್ಮ ಜಮಾಅತ್ ಹಿಂದಿನ ವರ್ಷಕ್ಕಿಂತ 1.1 ಮಿಲಿಯನ್ ಪೌಂಡ್ ಹೆಚ್ಚಿಗೆ ಚಂದ ನೀಡಿದೆ.

ಈ ವರ್ಷ ಸಹ ಜರ್ಮನಿಯ ಜಮಾಅತ್ ಲೋಕದ ಎಲ್ಲ ಜಮಾಅತ್‌ಗಳಲ್ಲಿ ಪ್ರಥಮ ಸ್ಥಾನ ಪಡೆದಿದೆ.

ಪಾಕಿಸ್ಥಾನದ ಜಮಾಅತ್ ಸಹ ಅಲ್ಲಾಹನ ಅನುಗ್ರಹದಿಂದ ಬಹಳ ತ್ಯಾಗ ಮಾಡಿದೆ. ಆದರೆ ಅಲ್ಲಿನ ಆರ್ಥಿಕ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ. ಅಲ್ಲಿನ ರೂಪಾಯಿಯ ಮೌಲ್ಯ ಕುಸಿದಿದೆ. ಆದುದರಿಂದ ಅವರು ಹಿಂದೆ ಆಗಿದ್ದಾರೆ. ಆದರೆ ಅವರು ತ್ಯಾಗ ಮಾಡುವುದರಲ್ಲಿ ಮುಂದೆಯೇ ಸಾಗಿದ್ದಾರೆ. ಜರ್ಮನಿ ಪ್ರಥಮ ಸ್ಥಾನದಲ್ಲಿದ್ದರೂ ಅಲ್ಲಿನ ಸ್ಥಳೀಯ ಕರೆನ್ಸಿಯ ಮಟ್ಟದಲ್ಲಿ ಅವರಲ್ಲಿ ಕೊರತೆ ಸಂಭವಿಸಿದೆ. ಬ್ರಿಟನ್ ಮತ್ತು ಅಮೇರಿಕದ ಚಂದ ವರ್ಧಿಸುತ್ತಿರುವುದು ಇದೇ ರೀತಿ ಮುಂದುವರಿಸಿದರೆ ಅವರು ಜರ್ಮನಿಗಿಂತ ಮುಂದೆ ಸಾಗಲು ಸಾಧ್ಯವಿದೆ.

ಇದೇ ರೀತಿ ಕೆನಡ, ಆಸ್ಟ್ರೇಲಿಯಾ, ಭಾರತ ಮತ್ತು ಘಾನದ ಜಮಾಅತ್‌ಗಳ ಚಂದಗಳಲ್ಲಿ ಸಹ ಎದ್ದು ಕಾಣುವ ವರ್ಧನೆ ಸಂಭವಿಸಿದೆ.

ಕಾರ್ಯನಿರ್ವಹಣೆಯ ದೃಷ್ಟಿಯಲ್ಲಿ ನಂತರದ ಗಮನಾರ್ಹವಾದ ಜಮಾಅತ್‌ಗಳು ಹಾಲೇಂಡ್, ಫ್ರಾನ್ಸ್, ಸ್ವೀಡನ್, ಜೋರ್ಜಿಯಾ, ನಾರ್ವೇ, ಬೆಲ್‌ಜಿಯಂ, ಬರ್ಮಾ, ಮಲೇಶಿಯಾ, ನ್ಯೂಝಿಲೇಂಡ್, ಬಂಗ್ಲಾದೇಶ, ಕರೀಬಾತಿ, ಖಝಖಿಸ್ಥಾನ, ತತಾರಿಸ್ಥಾನ, ಫಿಲಿಪ್ಪೈನ್ಸ್, ಮತ್ತು ಮಧ್ಯಪೂರ್ವದ ಒಂದು ದೇಶ ಆಗಿವೆ.

ಆಫ್ರಿಕದ ದೇಶಗಳಲ್ಲಿ ಚಂದ ವಸೂಲಾಗಿರುವ ದೃಷ್ಟಿಯಲ್ಲಿ ಎದ್ದು ಕಾಣುವ ಸ್ಥಾನ ಘಾನ ದೇಶಕ್ಕಿದೆ. ಅನಂತರ ಮೌರಿಷಸ್, ನೈಜೀರಿಯಾ, ಬುರ್ಕಿನೋಫಾಸೋ, ತನ್‌ಝಾನಿಯಾ, ಗ್ಯಾಂಬಿಯಾ, ಲೈಬೀರಿಯಾ, ಯುಗಾಂಡಾ, ಸಿಯರ್ರಾಲಿಯೋನ್ ಮತ್ತು ಬೆನಿನ್ ಅನುಕ್ರಮವಾಗಿ ಸ್ಥಾನ ಪಡೆದಿದೆ.

ಪ್ರತಿ ವ್ಯಕ್ತಿ ಚಂದದ ದೃಷ್ಟಿಯಲ್ಲಿ ಅಮೇರಿಕ, ಬ್ರಿಟನ್, ಮತ್ತು ಆಸ್ಟ್ರೇಲಿಯಾ ಸ್ಥಾನಗಳನ್ನು ಪಡೆದಿವೆ. ಚಂದ ನೀಡುವವರ ಒಟ್ಟು ಸಂಖ್ಯೆ 15 ಲಕ್ಷ 94 ಸಾವಿರವಾಗಿದೆ.

ಚಂದ ನೀಡುವವರ ಸಂಖ್ಯೆ ವರ್ಧಿಸಿದ ದೃಷ್ಟಿಯಲ್ಲಿ ಆಫ್ರಿಕದ ದೇಶಗಳಲ್ಲಿ ನೈಜೀರಿಯಾ ಪ್ರಥಮ ಸ್ಥಾನದಲ್ಲಿದೆ. ಅನಂತರ ಗಿನ ಬಸಾವೋ, ಕಾಂಗೋ ಬ್ರಾಝ್‌ವೀಲ್, ಗಿನಿ ಕನಾಕರಿ, ತಾಂಝಾನಿಯಾ, ಕೋಂಗೋ ಕನ್‌ಸಾಸಾ, ಗ್ಯಾಂಬಿಯಾ, ಕೆಮರೂನ್, ಐವರಿಕೋಸ್ಟ್, ನೈಜರ್, ಸೆನೆಗಲ್, ಬುರ್ಕಿನೋಫಾಸೋ ದೇಶಗಳು ಅನುಕ್ರಮವಾಗಿ ಸ್ಥಾನ ಪಡೆದಿವೆ.

ತಹ್‌ರೀಕ್ ಜದೀದ್ ಚಂದದ ದಫ್ತರ್ ಅವ್ವಲ್‌ಗೆ ಸೇರಿದವರ ಖಾತೆಗಳು ಅಲ್ಲಾಹನ ಅನುಗ್ರಹದಿಂದ ಈಗಲೂ ಜಾರಿಯಲ್ಲಿವೆ.

ಜರ್ಮನಿಯ ಮೊದಲ ಹತ್ತು ಜಮಾಅತುಗಳು: Rdermark, Rodgau, Mehdi-Abad, Nidda, Kolon, Flrsheim, Neuss, Pinneberg, Osnabrck, Fraed berg.

ಲೋಕಲ್ ಇಮಾರತಿನಲ್ಲಿ Hamburg, Frankfurt, Gross-Gerau, Wiesbaden, Dietzenbach, Riedstadt, Mrfelden, Rsselsheim, Darmstadt, Mannheim.

ಪಾಕಿಸ್ತಾನದಲ್ಲಿ ಮೊದಲ ಸ್ಥಾನ ಲಾಹೋರ್, ಎರಡು ರಬ್ವ, ಮೂರು ಕರಾಚಿ.

ಜಿಲ್ಲಾ ಮಟ್ಟದಲ್ಲಿ ಸಿಯಾಲ್‌ಕೋಟ್ ಮೊದಲ ಸ್ಥಾನ, ನಂತರ ಇಸ್ಲಾಮಾಬಾದ್, ಗುಜ್ರಾನ್‌ವಾಲ, ಗುಜ್ರಾತ್, ಉಮರ್ ಕೋಟ್, ಹೈದರಾಬಾದ್, ಮೀರ್‌ಪೂರ್ ಖಾಸ್, ಸರ್‌ಗೋದ, ಕೋಯಿಟ, ಲೋಧ್ರಾ.

ಉಮರ್‌ಕೋಟ್ ಮತ್ತು ಮೀರ್‌ಪೂರ್ ಖಾಸ್ ಪ್ರದೇಶಗಳಲ್ಲಿ ಕಳೆದ ದಿನಗಳಲ್ಲಿ ಪ್ರವಾಹ ಉಂಟಾಗಿತ್ತು. ಈ ಪ್ರದೇಶಗಳಲ್ಲೂ ಅಲ್ಲಾಹನ ಅನುಗ್ರಹದಿಂದ ಜನರು ಬಹಳ ದೊಡ್ಡ ಧನತ್ಯಾಗಗಳನ್ನು ಮಾಡಿರುವರು.

ಬ್ರಿಟೇನಿನ ಐದು ರೀಜನ್‌ಗಳಲ್ಲಿ ಮೊದಲ ಸ್ಥಾನ ಬೈತುಲ್ ಫುತೂಹ್, ನಂತರ ಇಸ್ಲಾಮಾಬಾದ್, ಮಸ್ಜಿದ್ ಫಝ್ಲ್, ಮಿಡ್‌ಲ್ಯಾಂಡ್ಸ್, ಬೈತುಲ್ ಇಹ್‌ಸಾನ್.

ಒಟ್ಟು ವಸೂಲಿಯ ಮಟ್ಟದಲ್ಲಿ ಬ್ರಿಟನಿನ ಮೊದಲ ಹತ್ತು ಜಮಾಅತುಗಳು ಹೀಗಿವೆ: Farnham, South Cheam, ಇಸ್ಲಾಮಾಬಾದ್, Worcester Park, South Walsall, Gillingham, masjid fazl, Aldershot, Patni.

ಅಮೇರಿಕದ ಜಮಾಅತುಗಳಲ್ಲಿ ಒಂದು Maryland, Los Angeles, North Virginia, Detroit, Silicon Valley, Chicago, Seattle, Oshkosh, South Virginia, Atlanta, Georgia, North Jersi, York.

ಕೆನಡದ ಜಮಾಅತುಗಳಲ್ಲಿ ಒಂದು Vaughan, Peace Village, Calgary, Vancouver, Toronto.

ಇಂಡಿಯಾದ ಜಮಾಅತುಗಳಲ್ಲಿ ಮೊದಲ ಹತ್ತು ಸ್ಥಾನಗಳು ಅನುಕ್ರಮವಾಗಿ ಹೀಗಿವೆ: ಕೊಯಂಬತ್ತೂರು, ಖಾದಿಯಾನ್, ಹೈದರಾಬಾದ್, ಕರುಳಾಯಿ, ಪತ್ತಪಿರಿಯಂ, ಕೋಝಿಕ್ಕೋಡ್, ಬೆಂಗಳೂರು, ಮೇಲೆಪಾಳಯಂ, ಕೊಲ್ಕತ್ತ, ಕೇರಂಗ್.

ತ್ಯಾಗದ ದೃಷ್ಟಿಯಲ್ಲಿ ಭಾರತದ ರಾಜ್ಯಗಳು ಅನುಕ್ರಮವಾಗಿ ಕೇರಳ, ತಮಿಳುನಾಡು, ಕರ್ನಾಟಕ, ಜಮ್ಮುಕಾಶ್ಮೀರ, ತೆಲಂಗಾಣ, ಒಡಿಶ, ಪಂಜಾಬು, ಪ. ಬಂಗಾಳ, ದೆಹಲಿ, ಮಹಾರಾಷ್ಟ್ರ.

ಆಸ್ಟ್ರೇಲಿಯದ ಹತ್ತು ಜಮಾಅತುಗಳು ಅನುಕ್ರಮವಾಗಿ ಹೀಗಿವೆ: Castle Hill, Melbourne Long Warren, Melbourne, Berwick, Marsden Park, Penrith, Paramatta, Adelaide West, ACT Canberra, Parzaban logon east.

ಇದಾಗಿವೆ ಸ್ಥಾನಗಳು. ಅಲ್ಲಾಹನು ತ್ಯಾಗವಮಾಡುವವರ ಸಂಪತ್ತಿನಲ್ಲಿಯೂ ಸಂತಾನಗಳಲ್ಲೂ ಅಪರಿಮಿತ ಅನುಗ್ರಹ ದಯಪಾಲಿಸಲಿ.

ಯು.ಕೆ. ಜಮಾಅತ್ ಬ್ರಿಟನಿನ ಅಹ್ಮದಿಯಾ ಜಮಾಅತಿನ ಚರಿತ್ರೆಗೆ ಸಂಬಂಧಿಸಿದ ಒಂದು ವೆಬ್‌ಸೈಟ್ ಪ್ರಾರಂಭಿಸಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪಶ್ಚಿಮದ ದೇಶಗಳಲ್ಲಿ ಇಸ್ಲಾಮ್ ಧರ್ಮ ಪ್ರಚಾರಕ್ಕೆ ನಡೆಸಿದ ಪ್ರಯತ್ನಗಳ ಬಗ್ಗೆ ಸಂಶೋಧನಾತ್ಮಕ ಪ್ರಬಂಧಗಳು ಈ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಯು.ಕೆ.ಯಲ್ಲಿ ಅಹ್ಮದಿಯಾ ಜಮಾಅತ್ 1913ರಲ್ಲಿ ಪ್ರಾರಂಭವಾಯಿತು ಎಂದು ಗಣಿಸಲಾಗುತ್ತಿದೆ. ಆ ವರ್ಷ ಚೌಧರಿ ಫತ್‌ಹ್ ಮುಹಮ್ಮದ್ ಸಯ್ಯಾಲ್ ಸಾಹಿಬ್(ರ) ಇಲ್ಲಿಗೆ ಆಗಮಿಸಿದ್ದರು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸಂದೇಶ ಬ್ರಿಟನ್ ಮತ್ತು ಇತರ ಯುರೋಪಿಯನ್ ದೇಶಗಳಲ್ಲಿ ಅವರು ತಾನು ಮುಜದ್ದಿದ್ ಎಂದು ವಾದಿಸಿದ ಕಾಲದಲ್ಲಿಯೇ ತಲಪಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ವಾದಗಳ ಬಗ್ಗೆ ಸಾಕ್ಷ್ಯಾಧಾರ ನೀಡಲು ಒಂದು ಪತ್ರವನ್ನೂ ಒಂದು ವಿಜ್ಞಾಪನೆಯನ್ನೂ ಇಂಗ್ಲಿಷ್ ಭಾಷೆಯಲ್ಲಿ ಮುದ್ರಿಸಿ ಅದರ ಎಂಟು ಸಾವಿರ ಪ್ರತಿಗಳನ್ನು ಹಿಂದೂಸ್ಥಾನ ಮತ್ತು ಇಂಗ್ಲೆಂಡಿನ ಪ್ರಸಿದ್ಧರಾದ ಗಣ್ಯ ಪಾದರಿಗಳಿಗೂ ವಿವಿಧ ಸಂಸ್ಥೆಗಳ ಮತ್ತು ಧರ್ಮಗಳ ನಾಯಕರಿಗೂ ಆ ಕಾಲದಲ್ಲಿ ಸಾಧ್ಯವಾದ ರೀತಿಯಲ್ಲಿ ತಲಪಿಸಿದ್ದರು. ಇದಕ್ಕೆ ಸಂಬಂಧಿಸಿದ ಒಂದು ಉದಾಹರಣೆ ಹೀಗಿದೆ: ಇಂಗ್ಲೆಂಡಿನ ಚಾರ್ಲ್‌ಸ್ ಬ್ರೇಡ್‌ಲಾ ಎಂಬ ಒಬ್ಬ ರಾಜಕಾರಣಿ ನಾಸ್ತಿಕನೂ ಆಗಿದ್ದನು. ಆತನಿಗೆ 1885ರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಹ್ವಾನ ತಲಪಿತ್ತು. ಇದರ ಬಗ್ಗೆ ಇಂಗ್ಲೆಂಡಿನ ಒಂದು ಪತ್ರಿಕೆಯಾದ ಕೋರ್ ಕೋನ್‌ಸ್ಟಿಟ್ಯೂಶನ್ ತನ್ನ 1885 ಜೂನ್ ದಿನಾಂಕ 8ರ ಸಂಚಿಕೆಯಲ್ಲಿ ಪ್ರಕಟಿಸಿದೆ. ಇದೇ ರೀತಿ ಥಿಯೋಸೋಫಿಸ್ಟ್ ಸೊಸೈಟಿಯ ಸ್ಥಾಪಕರಲ್ಲಿ ಒಬ್ಬನಾದ ಹೆನ್ರಿ ಸ್ಟೀಲ್ ಆಲ್‌ಕಾಟ್ ಎಂಬವನಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಂದೇಶ 1886ರಲ್ಲಿ ತಲಪಿತ್ತು. ಅದರ ಬಗ್ಗೆ ಅವನು ತನ್ನ ಪತ್ರಿಕೆಯಾದ ಥಿಯೋಸೋಫಿಸ್ಟ್‌ನಲ್ಲಿ 1886ರ ಸೆಪ್ಟಂಬರ್ ಸಂಚಿಕೆಯಲ್ಲಿ ಪ್ರಕಟಿಸಿದ್ದಾನೆ.

ಈಗ ಉದ್ಘಾಟಿಸಲಾದ ಈ ವೆಬ್‌ಸೈಟ್‌ನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅನುಗ್ರಹಭರಿತ ಕಾಲದ ಒಂದು ಟೈಮ್‌ಲೈನ್ ಪ್ರಕಟಿಸಲಾಗಿದೆ. ಅದರಲ್ಲಿ ಪಶ್ಚಿಮದ ದೇಶಗಳಿಗೆ ಸತ್ಯಸಂದೇಶ ತಲಪಿಸಿದ ಬಗ್ಗೆ ವಾಸ್ತವಿಕಾಂಶಗಳು ವಿವರಿಸಲಾಗಿದೆ. ಇದಲ್ಲದೆ ಪಯೋನೀರ್ ಮಿಶನರೀಸ್ ಎಂಬ ಹೆಸರಲ್ಲಿ ಸಹ ಒಂದು ಟೈಮ್‌ಲೈನ್ ಸಿದ್ಧಪಡಿಸಲಾಗಿದೆ. ಅದರಲ್ಲಿ ಆದ್ಯ ಪ್ರವರ್ತಕರಾದ ಮುಬಲ್ಲಿಗರ ಬಗ್ಗೆ ವಿವರಿಸಲಾಗಿದೆ. ಅವರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬರೂ ಸೇರಿದ್ದಾರೆ. ಯು.ಕೆ.ಯಲ್ಲಿ ಅವರು ಮಾಡಿದ ಸೇವೆಗಳ ಬಗ್ಗೆ ವಿವರಿಸಲಾಗಿದೆ. ಪಾದರಿ ಪಿಗಟ್ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪ್ರಕಟಿಸಿದ ಭವಿಷ್ಯವಾಣಿ ಬಗ್ಗೆ ಸಂಪೂರ್ಣ ಸಂಶೋಧನಾತ್ಮಕ ವಿವರಣೆಗಳು, ಅದಕ್ಕೆ ಸಂಬಂಧಿಸಿದ ಎಲ್ಲ ಉದ್ಧರಣೆಗಳೊಂದಿಗೆ ಪ್ರಕಟಿಸಲಾಗಿದೆ. ಇದಲ್ಲದೆ ಚರಿತ್ರೆಗೆ ಸಂಬಂಧಿಸಿದ ಇನ್ನಷ್ಟು ಪ್ರಬಂಧಗಳು ಪ್ರಕಟಿಸಲಾಗಿವೆ. ಇವುಗಳು ನಮ್ಮ ಯುವ ಪೀಳಿಗೆಗಳಿಗೆ ಅವರು ಮತ್ತು ಅವರ ತಂದೆ ತಾತಂದಿರು ಈ ಪಶ್ಚಿಮದ ದೇಶಗಳಿಗೆ ಆಗಮಿಸಿದ ಮೂಲ ಉದ್ದೇಶ ಏನಾಗಿತ್ತೆಂದು ಸ್ಪಷ್ಟಪಡಿಸಿಕೊಡುವುವು. ಈ ವೆಬ್‌ಸೈಟ್‌ನ ಎಡ್ರೆಸ್ಸ್ – history.ahmadiyya.uk

ಈ ವೆಬ್‌ಸೈಟ್ ಈಗಾಗಲೇ ಚಾಲನೆಯಲ್ಲಿದೆ. ಆದರೆ ಔಪಚಾರಿಕವಾಗಿ ಇಂದು ಜಾರಿಗೊಳಿಸಲಾಗುತ್ತಿದೆ. ಈ ವೆಬ್‌ಸೈಟ್ ನಮ್ಮವರಿಗೂ ಅನ್ಯರಿಗೂ ಲಾಭಕರವಾಗುವಂತೆ ಸರ್ವಶಕ್ತನಾದ ಅಲ್ಲಾಹನು ಮಾಡಲಿ – ಆಮೀನ್.

***********

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್–ವ–ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**Love for All, Hatred for None**

## ತಫ್ಸೀರ್ ಹಝ್ರತ್ ಮುಸ್ಲಿಹ್ ಮೌಊದ್(ರ)

**ಸರ್ವಶಕ್ತನಾದ ಅಲ್ಲಾಹನು ಹಲಾಲ್ ಮಾಡಿದ ವಸ್ತುಗಳನ್ನು ಮಾತ್ರ ನಾವು ಹಲಾಲ್ ಎಂದು ಕರೆಯಬಹುದು ಮತ್ತು ಹರಾಮ್ ಮಾಡಿದ ವಸ್ತುಗಳನ್ನು ಹರಾಮ್ ಎಂದು ಕರೆಯಬಹುದು. ಉಳಿದ ಮಧ್ಯಂತರ ವಿಷಯಗಳ ತೀರ್ಪು ಹಲಾಲ್ ಮತ್ತು ಹರಾಮ್‌ಗೆ ಒಳಪಟ್ಟಿರುತ್ತದೆ**

**ಉಳಿದವುಗಳಲ್ಲಿ, ಒಳ್ಳೆಯದು ಹಲಾಲ್ ಮತ್ತು ಬಾಕಿ ಹಲಾಲ್ ಅಲ್ಲ**
**ಇದರಿಂದ ಹಲಾಲ್ ವಸ್ತುಗಳೆಲ್ಲ ತಯ್ಯಿಬ್ ಅಲ್ಲ, ತಯ್ಯಾಬ್ ಇರುವ ವಸ್ತುಗಳು ಮಾತ್ರ ತಿನ್ನಲು ಅನುಮತಿಸಲಾಗಿದೆ, ಉಳಿದವುಗಳನ್ನು ತಿನ್ನಲು ಅನುಮತಿ ಇಲ್ಲ ಎಂದು ತಿಳಿದುಬಂದಿದೆ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹಲ್ ಆಯತ್ 116 **ಇನ್ನಮಾ ಹರ್ರಮ ಅಲೈಕುಮುಲ್ ಮೈತತ ವದ್ದಮ ವಲಹ್ಮಲ್‌ಖಿನ್‌ಝೀರಿ ವಮಾ ಉಹಿಲ್ಲ ಲಿಗೈರಿಲ್ಲಾಹಿ ಬಿಹೀ; ಫಮನಿಝ್ತುರ್ರ ಗೈರ ಬಾಗಿಂವ್ವಲಾ ಆದಿನ್ ಫಇನ್ನಲ್ಲಾಹ ಗಫೂರುರ್ರಹೀಮ್**. (ಅನುವಾದ: ಸತ್ತಪ್ರಾಣಿ, ರಕ್ತ, ಹಂದಿಮಾಂಸ ಮತ್ತು ಅಲ್ಲಾಹೇತರ ನಾಮದಲ್ಲಿ ಅರ್ಪಿಸಲ್ಪಟ್ಟದ್ದನ್ನು ಅವನು ನಿಮಗೆ ನಿಷಿದ್ಧಗೊಳಿಸಿದ್ದಾನೆ. ಆದರೆ ಯಾರಾದರೂ ಸ್ವಯಂ ಇಚ್ಚಿಸದೆ, ಮೇರೆ ಮೀರದೆಯೂ ನಿರ್ಬಂಧಿಸಲ್ಪಟ್ಟರೆ, ಆಗ ಖಂಡಿತವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ) ಇದರ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಈ ಆಯತ್ತಿಗೆ ಸಂಬಂಧಿಸಿದಂತೆ ಒಂದು ದೊಡ್ಡ ಪ್ರಶ್ನೆ ಉದ್ಭವಿಸುತ್ತದೆ ಅಂದರೆ ಇದರಲ್ಲಿ ನಾಲ್ಕು ವಿಷಯಗಳನ್ನು ಉಲ್ಲೇಖಿಸಲಾಗಿದೆ. ಈ ನಾಲ್ಕು ವಿಷಯಗಳು ಹರಾಮ್ ಮತ್ತು ಅವುಗಳ ಹೊರತಾಗಿ ಬೇರೇನೂ ಹರಾಮ್ ಇಲ್ಲವೇ?

ಈ ವಿಷಯಗಳು ಹರಾಮ್, ಬೇರೇನೂ ಹರಾಮ್ ಇಲ್ಲ ಎಂದು ಹೇಳಿದವರ ಅಭಿಪ್ರಾಯದಂತೆ, ನನ್ನ ಅಭಿಪ್ರಾಯವು ಅದೇ ಆಗಿದೆ. ಏಕೆಂದರೆ ಅದಕ್ಕಿಂತ ಬೇರೆ ಅರ್ಥವಿಲ್ಲ. ಈ ಅಭಿಪ್ರಾಯವನ್ನು ಹೊಂದಿರುವ ಜನರಲ್ಲಿ ಒಬ್ಬರು ಇಬ್ನ್ ಅಬ್ಬಾಸ್(ರ) ಆಗಿದ್ದಾರೆ. ಅವರ ಪ್ರಕಾರ, ಬುಖಾರಿಯಲ್ಲಿ ಜಾಬಿರ್ ಬಿನ್ ಅಬ್ದುಲ್ಲಾ(ರ)ರವರ ಒಂದು ವರದಿ ಇದೆ ಅವರ ಅಭಿಪ್ರಾಯವು ಈ ಆಯತ್‌ನಲ್ಲಿ ಉಲ್ಲೇಖಿಸಲಾದ ನಾಲ್ಕು ವಿಷಯಗಳನ್ನು ಹರಾಮ್‌ಗೊಳಿಸಲಾಗಿದೆ ಎಂದಾಗಿತ್ತು. (ಸಾಹಿಹ್ ಬುಖಾರಿ, ಸಂಪುಟ–3, ಮತ್ತು ರೂಹ್ ಅಲ್–ಮಾನಿ, ಸಂಪುಟ–8)

ಮತ್ತು ಅಬೂ ದಾವೂದ್‌ನ ಒಂದು ವರದಿ ಈ ರೀತಿ ಇದೆ, ಇಬ್ನ್ ಉಮರ್ ಕೂಡ ಅದೇ ಧರ್ಮವನ್ನು ಹೊಂದಿದ್ದರು. **ಅನ್ನಹೂ ಸುಇಲ ಅನ್ ಉಕ್ಲಿಲದ ಖಿನ್‌ಫುಝಿ ಖತಲ ಫತಲಾ ಖಿಲ್ ಲಾ ಅಜಿದು ಫೀ ಮಾ ಊಹಿಯಾ ಇಲೈಯಲ್ ಆಯತ್**. (ಸುನನ್ ಅಬೂದಾವೂದ್, ಭಾಗ–3, ಕಿತಾಬುಲ್ ಅತ್‌ಅಮ)

ಮತ್ತು ಹಝ್ರತ್ ಆಯಿಶಾ(ರ) ಅವರಿಂದಲೂ ಸಹ ಅಬೀ ಹಾತಿಮ್‌ರವರು ಮತ್ತಿತರರು ಮುಸ್ನದ್‌ನಿಂದ ವರದಿ ಮಾಡಿದ್ದಾರೆ **ಇನ್ನಹಾ ಕಾನತ್ ಇಝಾ ಸುಈಲತ್ ಅನ್ ಅಕ್ಲಿ ಕುಲ್ಲಿ ಝೀ ನಾಬಿನ್ ಮಿನಸ್ಸಬಾಇ ವ ಮುಖ್ಲಬಿನ್ ಮಿನತ್ತೈರಿ ಖಾಲತ್ ಖಿಲ್‌ಲಾ ಅಜಿದೂ ಫೀ ಮಾ ಊಹಿಯಾ ಇಲೈಯಲ್ ಆಯತ್** (ರೂಹುಲ್ ಮಆನಿ, ಸಂಪುಟ–8)

ಅಂತೆಯೇ, ಇಬ್ನ್ ಅಬಿ ಹಾತಿಮ್ ಅವರು ಇಬ್ನ್ ಅಬ್ಬಾಸ್(ರ) ಅವರಿಂದ ವರದಿ ಮಾಡುತ್ತಾರೆ: **ಖಾಲ ಲೈಸ ಮಿನದ್ದವಾಬ್ಬಿ ಶೈಉನ್ ಹರಾಮುನ್ ಇಲ್ಲಾ ಮಾ ಹರ್ರಮ ಲ್ಲಾಹು ತಆಲ ಫೀ ಕಿತಾಬಿಹೀ ಖಿಲ್ ಲಾ ಅಜಿದು** ಇಮಾಮ್ ಮಾಲಿಕ್ ಕೂಡ ಅದೇ ಧರ್ಮವನ್ನು ಹೊಂದಿದ್ದರು.

(ರುಹ್ ಅಲ್–ಮಾನಿ, ಸಂಪುಟ 8, ಸೂರಾ ಅನ್‌ಆಮ್)

ಈಗ ಪ್ರಶ್ನೆ ಏನೆಂದರೆ ಎಲ್ಲಾ ಇತರ ವಸ್ತುಗಳನ್ನು ತಿನ್ನಲು ಅನುಮತಿ ಇದೆಯೇ? ಕೆಲವು ಇಮಾಮ್‌ಗಳ ಧರ್ಮವೆಂದರೆ ಅವುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವಸ್ತುಗಳನ್ನು ತಿನ್ನಲು ಅನುಮತಿ ಇದೆ, ಆದರೆ, ನನ್ನ ಪ್ರಕಾರ, ಕೆಲವು ವಸ್ತುಗಳನ್ನು ತಿನ್ನುವುದು ಕಾನೂನುಬಾಹಿರವಾಗಿದೆ, ಆದರೆ ನಾವು ಅವುಗಳನ್ನು ಶರಿಯಾದ ಪದದಲ್ಲಿ ಹರಾಮ್ ಎಂದು ಕರೆಯಲಾಗುವುದಿಲ್ಲ. ಹೀಗಾಗಿ, ಇಬ್ನೆ ಮಾಜದಲ್ಲಿ ಸಲ್ಮಾನ್(ರ) ಅವರು ವರದಿ ಮಾಡುತ್ತಾರೆ ಪ್ರವಾದಿ(ಸ)ರವರು ನುಡಿದರು: **ಅಲ್–ಹಲಾಲ್, ಮಾ ಅಹಲಲ್ಲಾಹು ಫೀ ಕಿತಾಬಿಹೀ ವಲ್ ಹರಾಮು ಮಾ ಹರ್ರಮ ಅಲ್ಲಾಹು ಫೀ ಕಿತಾಬಿಹೀ** (ಇಬ್ನ್ ಕಸೀರ್, ಸಂಪುಟ–1, ಸೂರಾ ಅಲ್–ಬಕರಹ್)

ಇದರಿಂದ ನಾನು ತೀರ್ಮಾನಿಸುವುದೇನೆಂದರೆ, ಸರ್ವಶಕ್ತನಾದ ಅಲ್ಲಾಹನು ಹಲಾಲ್ ಮಾಡಿದ ವಸ್ತುಗಳನ್ನು ಮಾತ್ರ ನಾವು ಹಲಾಲ್ ಎಂದು ಕರೆಯಬಹುದು ಮತ್ತು ಯಾವ ವಸ್ತುಗಳನ್ನು ಅಲ್ಲಾಹನು ಹರಾಮ್ ಎಂದು ಕರೆದಿರುವನೋ ಅವುಗನ್ನು ನಾವು ಹರಾವ್ ಎಂದು ಕರೆಯಬಹುದು. ಮತ್ತು ಉಳಿದ ಮಧ್ಯಂತರ ವಸ್ತುಗಳ ಬಗ್ಗೆ ಹಲಾಲ್ ಮತ್ತು ಹರಾವ್‌ನ ಆದೇಶವು ಅದರ ಪ್ರಕಾರವಾಗುವುದು ಪಥ್ಯದ ಪ್ರಕಾರವಾಗುವುದಿಲ್ಲ. ಸೂರ ಅಲ್–ಮಾಇದ ದಲ್ಲಿ, ಅದೇ ಸತ್ಯದತ್ತ ಗಮನವನ್ನು ಸೆಳೆಯಲಾಗುತ್ತದೆ, ಅಲ್ಲಿ ಹೇಳಲಾಗಿದೆ, **ಉಹಿಲ್ಲತ್ ಲಕುಮ್ ಬಹೀಮತುಲ್ ಅನ್‌ಆಮಿ ಇಲ್ಲಾ ಮಾ ಯುತ್‌ಲಾ ಅಲೈಕುಮ್** "ನಿಮಗೆ ತಿಳಿಸಿ ಕೊಡಲಾದ ಪ್ರಾಣಿಗಳನ್ನು ಹೊರತುಪಡಿಸಿದ ಚತುಷ್ಪಾದಿ ಪ್ರಾಣಿಗಳನ್ನು ನಿಮಗೆ ಧರ್ಮಬದ್ಧಗೊಳಿಸಲಾಗಿದೆ."

ಚುಷ್ಪಾದಗಳು ಅನೇಕ ರೀತಿಯಲ್ಲಿವೆ. ಒಂಟೆಗಳು, ಮೇಕೆಗಳು, ಟಗರುಗಳು, ಕರುಗಳು, ಹಸುಗಳು ಇವೆಲ್ಲವು ಹಲಾಲ್ ಆಗಿವೆ. ಅದರ ನಂತರ ಅಲ್ಲಾಹನು ಹೇಳಿದನು: **ಹುರ್ರಿಮತ್ ಅಲೈಕುಮುಲ್ ಮೈತತ ವದ್ದಮ ವಲಹ್ಮಲ್‌ಖಿನ್‌ಝೀರಿ ವಮಾ ಉಹಿಲ್ಲ ಲಿಗೈರಿಲ್ಲಾಹಿ ಬಿಹೀ;** ಅಂದರೆ ಈ ಹಲಾಲ್ (ಧರ್ಮಬದ್ಧ) ಗಳಲ್ಲಿ ಕೆಲವು ಹರಾವ್ ಆಗಿವೆ. ಮೊದಲನೆಯದು ಸತ್ತಪ್ರಾಣಿ ಅದು ಹಲಾಲ್ ಪ್ರಾಣಿ ಆಗಿದ್ದರೂ, ಎರಡನೇಯದು ರಕ್ತ ಅದು ಸಹ ಹಲಾಲ್ ಪ್ರಾಣಿಯದ್ದಾಗಿದ್ದರೂ, ಮೂರನೇಯದು ಹಂದಿಮಾಂಸ ಮತ್ತು ನಾಲ್ಕನೇಯದು ಅಲ್ಲಾಹೇತರ ನಾಮದಲ್ಲಿ ಅರ್ಪಿಸಲ್ಪಟ್ಟದ್ದು. (ಅದು ಹಲಾಲ್ ಪ್ರಾಣಿಯದ್ದಾಗಿದ್ದರೂ) ಸಹ ನಿಷಿದ್ಧಗೊಳಿಸಲಾಗಿದೆ. ನಂತರ ಸತ್ತಪ್ರಾಣಿ ಮತ್ತು ರಕ್ತವನ್ನು ಮತ್ತಷ್ಟು ವಿವರಿಸಲಾಗಿದೆ ಮತ್ತು **ನತೀಹತುನ್–ವಮೌಖೂಝು** ಇತ್ಯಾದಿಗಳನ್ನು ನಿಷೇಧಿಸಲಾಗಿದೆ ಎಂದು ಹೇಳಿದನು. ಇದು ಹೊಸ ನಿಷೇಧವಲ್ಲ, ಆದರೆ ಸತ್ತಪ್ರಾಣಿ ಮತ್ತು ರಕ್ತದ ವ್ಯಾಖ್ಯಾನವಾಗಿದೆ. ಇದೆಲ್ಲವುಗಳನ್ನು ವಿವರಿಸಿದ ನಂತರ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **ಯಸ್‌ಅಲೂನಕ ಮಾಝಾ ಉಹಿಲ್ಲ ಲಹುಮ್** ಅಂದರೆ ಮುಸ್ಲಿಮರು ಕೇಳುತ್ತಾರೆ ಅವರಿಗೆ ಯಾವ ವಸ್ತುಗಳನ್ನು ಕಾನೂನುಬದ್ಧಗೊಳಿಸಲಾಗಿದೆ? ಈಗ **ಇನ್ನಮಾ ಹರ್ರಮ ಅಲೈಕುಮ್** ನ ಅನುವಾದವು ಇದರ ಹೊರತು ಎಲ್ಲವುಗಳನ್ನು ತಿನ್ನಲು ಅನುಮತಿ ಇದೆ ಎಂದು. ಹಾಗಾದರೆ ಪವಿತ್ರ ಖುರ್‌ಆನ್ ಈ ನಾಲ್ಕು ವಸ್ತುಗಳನ್ನು ಈ ಪ್ರಶ್ನೆಗೆ ಮೊದಲು ಏಕೆ ಕೇಳಿದನು? ಪುನಃ ಈ ಪ್ರಶ್ನೆ ಏಕೆ ಕೇಳಲಾಯಿತು?

ಹರಾಮ್(ನಿಷೇಧಿತ) ಮತ್ತು ಹಲಾಲ್ ವಿಷಯಗಳನ್ನು ವಿವರಿಸಿದ ನಂತರ, ಈ ಪ್ರಶ್ನೆಯನ್ನು ವಿವರಿಸಿ ಉತ್ತರಿಸುವುದರಿಂದ ಮೊದಲ ಹಲಾಲ್ ವಿಷಯಗಳ ವ್ಯಾಖ್ಯಾನದಲ್ಲಿ ಇನ್ನೂ ಕೆಲವು ಮುಚ್ಚುವಿಕೆ ಉಳಿದಿದೆ ಎಂದು ತೋರಿಸುತ್ತದೆ, ಅದರ ಬಗ್ಗೆ ಸಹಚರರು ಪ್ರಶ್ನೆಯನ್ನು ಕೇಳಿದಾಗ ಅವರ ಪ್ರಶ್ನೆಗೆ ಸರ್ವಶಕ್ತನಾದ ಅಲ್ಲಾಹನು ನಾವು ಈಗಾಗಲೇ ನಿಮಗೆ ಹೇಳಿದ್ದೇವೆ ಮತ್ತೇಕೆ ನೀವು ಪ್ರಶ್ನಿಸುತ್ತಿದ್ದೀರಿ ಎಂದು ಉತ್ತರಿಸಲಿಲ್ಲ. ಬದಲಿಗೆ ಪ್ರಶ್ನೆಯ ಅವಶ್ಯಕತೆಯನ್ನು ಒಪ್ಪಿಕೊಂಡು ಅದರ ಉತ್ತರವನ್ನು ಹೀಗೆ ನೀಡಿದನು **ಖಿಲ್ ಉಹಿಲ್ಲ ಲಕುಮುತ್ತೈಯಿಬಾತು** ಉಳಿದವುಗಳಲ್ಲಿ ಉತ್ತಮವಾದವು ಹಲಾಲ್ ಆಗಿರುವುದು ಮತ್ತು ಒಳ್ಳೆಯದಲ್ಲದವು ಅದು ಹಲಾಲ್ ಅಲ್ಲ. ಹಲಾಲ್ ಎಲ್ಲವೂ ಒಳ್ಳೆಯದಲ್ಲ ಎಂಬುದು ಇದರಿಂದ ತಿಳಿಯುತ್ತದೆ. ಉತ್ತಮವಾಗಿರುವ ವಸ್ತುಗಳನ್ನು ಮಾತ್ರ ತಿನ್ನಲು ಅವಕಾಶವಿದೆ ಉಳಿದ ವಸ್ತುಗಳಿಗೆ ಅವಕಾಶವಿಲ್ಲ. ಆದರೆ ಅದರ ಹೆಸರು ಹರಾಮ್ ಎಂದು ಹೇಳಲು ಸಾಧ್ಯವಿಲ್ಲ. ಪವಿತ್ರ ಪ್ರವಾದಿ(ಸ)ರವರು ಸಹ ಇದೇ ರೀತಿಯ ವಿಷಯವನ್ನು ವಿವರಿಸಿದ್ದಾರೆ, **ಇನ್ನಲ್‌ಹಲಾಲ ಬೈಯಿನುನ್ ವಲ್‌ಹರಾಮ ಬೈಯಿನುನ್ ವ ಬೈನಹುಮಾ ಉಮೂರುನ್ ಮುಶ್ತಬಿಹಾತುನ್ ಲಾ ಯಅ್‌ಲಮುಹಾ ಕಸೀರುಮ್ಮಿನನ್ನಾಸಿ** (ಬುಖಾರಿ ಸಂಪುಟ–2, ಕಿತಾಬುಲ್ ಬುಯಾ)

ಅಂದರೆ ಹಲಾಲ್ ಮತ್ತು ಹರಾಮ್ ಎರಡನ್ನೂ ಘೋಷಿಸಲಾಗಿದೆ. ನಂತರ ಈ ಎರಡರ ನಡುವೆ ಬಹುತೇಕರಿಗೆ ಗೊತ್ತಿಲ್ಲದ ಅನುಮಾನಾಸ್ಪದ ವ್ಯವಹಾರಗಳಿವೆ. ಆದ್ದರಿಂದ, ಊಹೆ, ವೈದ್ಯಕೀಯ ಜ್ಞಾನ, ಅನುಭವ ಇತ್ಯಾದಿಗಳ ಆಧಾರದ ಮೇಲೆ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–260, ಪ್ರಕಟಿತ ಖಾದಿಯಾನ್ 2010)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಹೇಳಿರುತ್ತಾರೆ. ಆದರೂ ಸಹ ನನಗೆ ಗುರುತಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅಷ್ಟೆಲ್ಲ ಜನಜಂಗುಳಿಯಲ್ಲಿ ಹೇಗೆ ನೆನಪಿಡಲು ಸಾಧ್ಯ? ಪೂರ್ಣ ರೀತಿಯ ಪರಿಚಯವಿಲ್ಲದೆ ಶಿಕ್ಷಣ ನೀಡಲು ಆಗುವುದಿಲ್ಲ. ಮತ್ತೆ ಮತ್ತೆ ಮಿತ್ರರು ಬರುತ್ತಿರಬೇಕು. ಜಲ್ಸದ ಹೊರತಾದ ದಿನಗಳಲ್ಲಿಯೂ ಬರಬೇಕು. ಆಗ ಮಾತ್ರ ನಾವು ಹೇಗೆ ಅವರಿಗೆ ಕಲಿಸಬೆಕು? ಮತ್ತು ಅವರಿಗೆ ಯಾವ ವಿದ್ಯೆಯ ಬಗ್ಗೆ ಆಸಕ್ತಿ ಇದೆ, ಅದರನ್ವಯ ಶಿಕ್ಷಣದ ವ್ಯವಸ್ಥೆ ಮಾಡಬಹುದು. ಯಾವ ಮಿತ್ರರು ಇಲ್ಲಿ ಬರುತ್ತಿರುತ್ತಾರೋ ಅವರಿಗೆ ವಿವಿದ ರೀತಿಯಲ್ಲಿ ಶಿಕ್ಷಣ ನೀಡಲಾಗುತ್ತದೆ ಮತ್ತು ಅದರಿಂದ ಪ್ರಯೋಜನವು ಆಗುತ್ತದೆ. ಒಬ್ಬರು ಹೇಳಬಹುದು. ನಮ್ಮಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಗ್ರಂಥಗಳಿವೆ ಅದರ ಅಧ್ಯಯನ ಮಾಡಿ ನಾವು ಧರ್ಮದ ಜ್ಞಾನ ಪಡೆಯುತ್ತೇವೆ ಎಂದು. ಈ ಗ್ರಂಥಗಳು ಖುರ್‌ಆನ್‌ಗಿಂತ ಮಿಗಿಲಾದುದಂತೂ ಅಲ್ಲ, ಆದರೆ ಖುರ್‌ಆನ್ ಇದ್ದರೂ ಜನರು ಧರ್ಮದಿಂದ ದೂರವಾಗಲಿಲ್ಲವೆ? ಅವಶ್ಯವಾಗಿ ದೂರವಾದರು ಅದರ ಕಾರಣವೇನೆಂದರೆ ಅವರ ಬಳಿ ಚಿಕಿತ್ಸೆಗೆ ಬೇಕಾದ ಪರಿಹಾರವಿತ್ತು. ಆದರೆ ಅದರ ಉಪಯೋಗ ಮಾತ್ರ ತಿಳಿದಿರಲಿಲ್ಲ. ಅದುದರಿಂದ ಮತ್ತೆ ಮತ್ತೆ ತಮ್ಮ ಇಲ್ಲಿನ ಬರುವಿಕೆ ಅವಶ್ಯಕವಾಗಿದೆ. ನಿಮ್ಮ ಅಗತ್ಯಕ್ಕೆ ತಕ್ಕಂತೆ ಚಿಕಿತ್ಸೆ ಪಡೆಯಬಹುದು ಮತ್ತು ಪ್ರಯೋಜನವು ಆಗುತ್ತದೆ. (ಭಾಷಣ ಜಲ್ಸ ಸಾಲಾನ ಖಾದಿಯಾನ್ 27 ಡಿಸೆಂಬರ್ 1917, ಅನ್ವಾರುಲ್ ಉಲೂಮ್ ಸಂಪುಟ–4, ಪುಟ–136)

**ಮೂಲದೊಂದಿಗೆ ಶಾಖೆಯ ಸಂಪರ್ಕ ಮುರಿದು ಹೋದರೆ ಅದು ಒಣಗಲು ಕಾರಣವಾಗುತ್ತದೆ.**

26 ಜನವರಿ 1921 ರಂದು ಅಸರ್ ನಮಾಝ್ ನಂತರ ಮದರಸ ಅಹ್ಮದಿಯಾದ ಬೋರ್ಡಿಂಗ್ ಕೊಣೆಯಲ್ಲಿ ಏಳನೇ ವರ್ಗದ ವಿದ್ಯಾರ್ಥಿಗಳು ಮತ್ತು ವಿವಿಧ ವಿಭಾಗಗಳ ಅಧಿಕಾರಿಗಳ ಮುಂದೆ ಒಂದು ಭಾಷಣ ಮಾಡಿದರು. ಅದರಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ಅವರಿಗೆಲ್ಲ ಉಪಯುಕ್ತ ಉಪದೇಶಗಳನ್ನು ನೀಡಿದರು. ಅದರಲ್ಲಿ ಮುಬಲ್ಲಿಗೀನರಿಗೆ ಮಾಡಿದ ಒಂದು ಉಪದೇಶ ಹೀಗಿತ್ತು.

ಜನರು ಮತ್ತೆ ಮತ್ತೆ ಖಾದಿಯಾನಿಗೆ ಬರಲು ಮತ್ತು ಸಂಪರ್ಕ ಹೊಂದುವಂತೆ ಪ್ರಯತ್ನ ಮಾಡಿರಿ. ಮೂಲದೊಂದಿಗೆ ಶಾಖೆಯ ಸಂಪರ್ಕವಿರುವವರೆಗೆ ಅದು ಹಸಿರಾಗಿರುತ್ತಾರೆ. ಆದರೆ ಮೂಲದೊಂದಿಗೆ ಶಾಖೆಯ ಸಂಪರ್ಕ ಮುರಿದು ಹೋದರೆ ಅದು ಒಣಗಲು ಕಾರಣವಾಗುತ್ತದೆ. ಈಗಿನ ಫಿತ್ನದ ಶೇ. 90% ಕಾರಣ, ಅವರು ಖಾದಿಯಾನಿಗೆ ಬಾರದಿರುವ ಕಾರಣವೇ ಆಗಿದೆ. ಹೆಚ್ಚಿನವರು ಖಾದಿಯಾನಿನಲ್ಲಿ ಈಗ ಯಾವ ಕೆಲಸವು ಉಳಿದಿಲ್ಲ. ಹಣ ಹೋಗುತ್ತದೆ ಮತ್ತು ಆ ಜನರು ಹಂಚಿಕೊಂಡು ತಿನ್ನುತ್ತಾರೆ ಎಂಬ ಭಾವನೆಯಲ್ಲಿದ್ದಾರೆ. ಆದುದರಿಂದ ಖಾದಿಯಾನಿಗೆ ಬರುವಂತೆ ಪ್ರಯತಿಸುತ್ತಿರಿ.

**ಖಾದಿಯಾನ್ ಬರುವವರಿಗೆ ಉಪದೇಶ**

27 ಡಿಸೆಂಬರ್ 1907 ರಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜಲ್ಸ ಸಾಲಾನದ ಸಂದರ್ಭದಲ್ಲಿ ಒಂದು ಸುದೀರ್ಘ ಭಾಷಣ ಮಾಡಿದರು ಮತ್ತು ಜಮಾತ್ ಸದಸ್ಯರಿಗೆ ತುಂಬಾ ಮನನೊಂದು ಮನಮುಟ್ಟುವಂತಹ ಉಪದೇಶ ಮಾಡಿದರು.

"ಒಬ್ಬ ವ್ಯಕ್ತಿಯು ತನ್ನ ಹೃದಯುವನ್ನು ಸಂಪೂರ್ಣವಾಗಿ ಶುದ್ಧಿಕರಿಸುವವರೆಗೆ ಮತ್ತು ತನ್ನ ಸಹೋದರನಿಗಾಗಿ ಕಷ್ಟವನ್ನು ಅನುಭವಿಸಲು ಸಿದ್ಧನಾಗುವವರೆಗೆ ಸರ್ವಶಕ್ತನಾದ ದೇವನೊಂದಿಗಿನ ವಿಷಯವನ್ನು ಪರಿಹರಿಸಲಾಗುವುದಿಲ್ಲ, ಈ ಮಾತುಗಳು ನಾನು ನಿಮಗೆ ಏಕೆ ಹೇಳುತ್ತಿದ್ದೇನೆಂದರೆ ನೀವು ಇಲ್ಲಿಂದ ಖಾಲಿ ಹೋಗುವಂತಾಗಬಾರದು. ಜೀವನದ ಯಾವ ಭರವಸೆಯೂ ಇಲ್ಲ. ಬರುವ ವರ್ಷದವರೆಗೆ ಯಾರು ಮರಣಹೊಂದುತ್ತಾರೆ? ಯಾರು ಬದುಕುಳಿಯುತ್ತಾರೆ ಯಾರು ಬಲ್ಲರು? ಆದುದರಿಂದ ಪರಿಶುದ್ಧ ರೀತಿಯಲ್ಲಿ ಪಶ್ಚಾತ್ತಾಪ ಪಡಬೇಕು. ಅಲ್ಲಾಹನು ಹೇಳಿದನು. ಯಾಆಯ್ಯುಹಲ್ಲಝೀನ. . . (ಅತ್ತಹರೀಮ್–9). ಮನುಷ್ಯನು ಪಶ್ಚಾತ್ತಾಪಪಡುವವನಾದರೆ ಶುದ್ಧ ರೀತಿಯಲ್ಲಿ ಪಶ್ಚಾತ್ತಾಪಡಬೇಕು. ವಾಸ್ತವವಾಗಿ ಅದು ದೇವನೆಡೆಗೆ ಮರಳುವುದು ಎಂದಾಗಿದೆ. ಕೇವಲ ಶಬ್ದೋಚ್ಛಾರವು ಒಂದು ಅಭ್ಯಾಸ ಎಂದಾಗಿರುತ್ತದೆ. ಅದಕ್ಕಾಗಿಯೇ ಅಲ್ಲಾಹನು ಕೇವಲ ನಾಲಿಗೆಯಿಂದ ಪಶ್ಚಾತ್ತಾಪ ಮಂತ್ರ ಹೇಳುತ್ತಾ ತಿರುಗಿರಿ ಎಂದು ಹೇಳಲಿಲ್ಲ. ಬದಲು ಅಲ್ಲಾಹನೆಡೆ ಮರಳಿರಿ. ಅವನೊಡನೆ ಮರಳುವ ಹಕ್ಕಿನ ಪ್ರಕಾರ, ಏಕೆಂದರೆ ಪಶ್ಚಾತ್ತಾಪಕ್ಕೆ ಒಂದು ವಿಶಿಷ್ಠ ಗುಣವಿದೆ, ಅದರಿಂದ ಪಾಪಗಳು ಕ್ಷಮಿಸಲ್ಪಡುತ್ತವೆ. (ಮಲ್ಫೂಝಾತ್, ಸಂಪುಟ–5, ಪುಟ 408, ಮುದ್ರಣ ಖಾದಿಯಾನ್ 2003)

ಅಲ್ಲಾಹನು ಆ ಭಾಗ್ಯ ನಮಗೆ ನೀಡುವಂತಾಗಲಿ. ಆಮೀನ್. ವ ಆಖಿರುದ್ದಾವನ ಅನಿಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್.

**(ಮನ್ಸೂರ್ ಅಹ್ಮದ್ ಮಸ್ರೂರ್)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್[ಅ]ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್[ಅತಬಿಅ]ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕರು)**

## ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಆಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ–3, ಪುಟ–284) (ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್[ಸ] ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ಸಂಪುಟ–1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

**ಇನ್ಸಾನಿಯತ್ ಝಿಂದಾಬಾದ್**

**ಮಾನವೀಯತೆ ಚಿರಕಾಲ ಬಾಳಲಿ**

**MUSLIM TELEVISION AHMADIYYA INTERNATIONAL**

**www.mta.tv**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಹುಝೂರ್ ಅನ್ವರ್(ಅತಬಿಅ) ಅವರು ಬಹುಪಯೋಗಿ ಸಭಾಂಗಣ ನಿರ್ಮಿಸಿರುವ ನೆಲ ಮಹಡಿಗೆ (ಬೇಸ್‌ಮೆಂಟ್‌ಗೆ) ಭೇಟಿ ನೀಡಿದರು. ಇದರ ವಿಸ್ತೀರ್ಣ 2451 ಚದರ ಅಡಿ ಇದೆ. ಪ್ರಸ್ತುತ ಇದನ್ನು ಪ್ರಾರ್ಥನೆ ಸಲ್ಲಿಸಲು ಬಳಸಲಾಗುತ್ತಿದೆ. ಈ ಸಭಾಂಗಣದಲ್ಲಿ 300 ಜನರು ಪ್ರಾರ್ಥನೆ ಸಲ್ಲಿಸಬಹುದು. ಈ ಸಭಾಂಗಣದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ವಾಶ್ ರೂಂಗಳಿವೆ ಮತ್ತು ವಾಣಿಜ್ಯ ಅಡುಗೆಮನೆಯೂ ಇದೆ.

ಪರಿಶೀಲನೆಯ ನಂತರ, ಹುಝೂರ್ ಅನ್ವರ್(ಅತಬಿಅ) ಮಸೀದಿಗೆ ಬಂದು ಝುಹರ್ ಮತ್ತು ಅಸರ್ ನಮಾಝ್‌ಗಳನ್ನು ನಿರ್ವಹಿಸಿದರು. ನಮಾಝ್ ನಿರ್ವಹಿಸಿದ ನಂತರ ಹುಝೂರ್ ಅನ್ವರ್(ಅತಬಿಅ) ತಮ್ಮ ನಿವಾಸಕ್ಕೆ ತೆರಳಿದರು.

**ಧರ್ಮ ಸುದ್ದಿ ಸೇವಾ ಪತ್ರಕರ್ತರಿಂದ ಹುಝೂರ್ ಅನ್ವರ್(ಅತಬಿಅ) ರವರ ಸಂದರ್ಶನ**

ಧರ್ಮ ವಾರ್ತಾ ಸೇವೆಯ ಪತ್ರಕರ್ತೆ ಎಮಿಲಿ ಮಿಲ್ಲರ್ ಹುಝೂರ್ ಅನ್ವರ್(ಅತಬಿಅ) ರವರ ಸಂದರ್ಶನಕ್ಕೆ ಬಂದಿದ್ದರು. ಅವರಿಗೆ ಅಮೆರಿಕದಲ್ಲಿ ಲಕ್ಷಾಂತರ ಅನುಯಾಯಿಗಳಿದ್ದಾರೆ. ಈ ಮಹಿಳಾ ಪತ್ರಕರ್ತೆ ಫತ್ಹೇ ಅಝೀಮ್ ಮಸೀದಿಯ ಹಿನ್ನೆಲೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಡಾ. ಡೂಯಿಯ ನಡುವಿನ ಪ್ರಾರ್ಥನ ಸಮರದ ಕುರಿತು ಲೇಖನವನ್ನು ಬರೆಯುತ್ತಿದ್ದಾರೆ.

ಕಾರ್ಯಕ್ರಮದ ಪ್ರಕಾರ, 6 ಗಂಟೆಗೆ ಹುಝೂರ್ ಅನ್ವರ್(ಅತಬಿಅ) ಸಂದರ್ಶನ ನಿಗದಿಯಾಗಿದ್ದ ವಸ್ತುಪ್ರದರ್ಶನ ಸಭಾಂಗಣಕ್ಕೆ ಭೇಟಿ ನೀಡಿದರು.

* **ಸಂದರ್ಶನದ ಆರಂಭದಲ್ಲಿ ಪತ್ರಕರ್ತರು ಕೇಳಿದ ಮೊದಲ ಪ್ರಶ್ನೆಯೆಂದರೆ ಈ ಮಸೀದಿಯನ್ನು ಉದ್ಘಾಟಿಸಲು ಹುಝೂರ್ ಅನ್ವರ್(ಅತಬಿಅ) ರವರು ಇಲ್ಲಿಗೆ ಬರುವುದರ ಮಹತ್ವವೇನು ಎಂಬುದು.**

ಈ ಕುರಿತು ಹುಝೂರ್ ಅನ್ವರ್(ಅತಬಿಅ) ಅವರು ಹೇಳಿದರು: ನಾವು ಎಲ್ಲೇ ಮಸೀದಿ ಕಟ್ಟುತ್ತೇವೆಯೋ ಅಲ್ಲಿಯ ಸಮುದಾಯದವರು ನಾನು ಅಲ್ಲಿಗೆ ಬರಲು ಸಾಧ್ಯವೇ ಎಂದು ಕೇಳುತ್ತಾರೆ. ಜರ್ಮನಿ ಅಥವಾ ಬ್ರಿಟನ್ ಅಥವಾ ಇನ್ನಾವುದೇ ದೇಶವಿರಲಿ, ಕೋವಿಡ್‌ಗೆ ಮೊದಲು ನಾನು ಮಸೀದಿಗಳ ಉದ್ಘಾಟನೆಗೆ ಹೋಗುತ್ತಿದ್ದೆ ಆದರೆ ಇಲ್ಲಿ ಝಿಯಾನ್‌ನಲ್ಲಿ ನೀವು ಪ್ರದರ್ಶನದಲ್ಲಿ ನೋಡಿದಂತಹ ವಿಶೇಷತೆ ಇದೆ ಆದ್ದರಿಂದ ಇದು ಕೂಡ ಒಂದು ಕಾರಣವಾಗಿದೆ.

ಹುಝೂರ್ ಅನ್ವರ್(ಅತಬಿಅ) ಹೇಳಿದರು: ನಾನು ಸಾಮಾನ್ಯವಾಗಿ ಮಸೀದಿಗಳನ್ನು ಉದ್ಘಾಟಿಸುತ್ತೇನೆ ಮತ್ತು ಅಲ್ಲಿ ನನ್ನ ಜಮಾಅತ್ತಿನ ಸದಸ್ಯರನ್ನು ಭೇಟಿಯಾಗುತ್ತೇನೆ. ಈ ರೀತಿಯಾಗಿ ಅವರನ್ನು ಪ್ರೋತ್ಸಾಹಿಸಲಾಗುತ್ತದೆ ಮತ್ತು ನಾನು ಅವರಿಗೆ ಸಲಹೆ ನೀಡುತ್ತೇನೆ ಮತ್ತು ಮಸೀದಿಯನ್ನು ನಿರ್ಮಿಸುವ ಉದ್ದೇಶವನ್ನು ಅವರಿಗೆ ತಿಳಿಸುತ್ತೇನೆ. ನೀವು ಇದನ್ನು ತಾತ್ಕಾಲಿಕವಾಗಿ ಅಥವಾ ಯಾವುದೋ ವಿಶೇಷ ಕಾರಣದಿಂದ ಆಚರಿಸಬೇಕು ಎಂದು ಅಲ್ಲ, ಆದರೆ ಸತ್ಯವೆಂದರೆ ನಮ್ಮ ಜೀವನ ಮತ್ತು ನಮ್ಮ ಧರ್ಮದ ಉದ್ದೇಶವು ಸರ್ವಶಕ್ತನಾದ ಅಲ್ಲಾಹನನ್ನು ಆರಾಧಿಸುವುದಾಗಿದೆ. ಮಸೀದಿಗಳನ್ನು ಈ ಉದ್ದೇಶಕ್ಕಾಗಿ ನಿರ್ಮಿಸಲಾಗುತ್ತದೆ ಮತ್ತು ನಾನು ನನ್ನ ಸದಸ್ಯರಿಗೆ ತಿಳಿಸುವುದೇನೆಂದರೆ ಅವರು ಮಸೀದಿಯ ನಿರ್ಮಾಣದ ಬಗ್ಗೆ ಸಂತೋಷವಾಗಿರಬಾರದು, ಆದರೆ ಅವರು ತಮ್ಮ ಜೀವನದ ಉದ್ದೇಶವೇನು ಎಂಬುದನ್ನು ಅರಿತುಕೊಳ್ಳಬೇಕು, ಇದರಿಂದ ಅವರು ಮಾರ್ಗದರ್ಶನ ಪಡೆಯುತ್ತಾರೆ ಮತ್ತು ನಂತರ ಅವರು ತಮ್ಮಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾರೆ ಮತ್ತು ಅವರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಯಾವುವು ಎಂದು ಅರ್ಥಮಾಡಿಕೊಳ್ಳುತ್ತಾರೆ.

* **ಈ ಮಸೀದಿಯ ಹೆಸರು ಫತ್ಹೇ ಅಝೀಮ್ ಆಗಿದೆ, ಇದರ ಅರ್ಥವೇನು ಎಂದು ಪತ್ರಕರ್ತರು ಎರಡನೇ ಪ್ರಶ್ನೆಯನ್ನು ಕೇಳಿದರು. ಯಾರ ಗೆಲುವು?**

ಈ ಕುರಿತು ಹುಝೂರ್ ಅನ್ವರ್(ಅತಬಿಅ) ಹೇಳಿದರು: ಈ ಪ್ರದರ್ಶನವನ್ನು ನೀವು ನೋಡಿದರೆ, ಮಸೀಹ್ ಮುಹಮ್ಮದಿ ಮತ್ತು ಮೊಸ್ಸಿಹ್ ಎಂದು ಕರೆಯಲ್ಪಡುವ ನಡುವಿನ ಸ್ಪರ್ಧೆಯು ಹೇಗೆ ಪ್ರಾರಂಭವಾಯಿತು ಎಂದು ನಿಮಗೆ ಅರ್ಥವಾಗುತ್ತದೆ, ಆದ್ದರಿಂದ ಇದು ಅಹ್ಮದೀಯ ಸ್ಥಾಪಕರು ಘೋಷಿಸಿದ ಪ್ರಾರ್ಥನೆಯ ಸಮರವಾಗಿದೆ. ಪ್ರವಾದಿಗಳು ಮತ್ತು ಪವಿತ್ರ ಜನರ ವಿರುದ್ಧ ಈ ಕೆಟ್ಟ ಭಾಷೆಯನ್ನು ಉಪಯೋಗಿಸಬೇಡಿ ಎಂದು ಹಝ್ರತ್ ಮಸೀಹ್ ಮೌಊದ್(ಅ) ಅವರು ಮೊದಲು ಡೂಯಿಗೆ ಸಲಹೆ ನೀಡಿದ್ದರು ಆದರೆ ಆತನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ನಿಂದಿಸುವುದನ್ನು ಮುಂದುವರೆಸಿದನು. ಅದೇ ರೀತಿ ಇಡೀ ಮುಸ್ಲಿಮ್ ಉಮ್ಮಾ ಮತ್ತು ಪ್ರತಿಯೊಬ್ಬ ಮುಸ್ಲಿಮ್ ನಾಶವಾಗಲಿ ಎಂದು ಅವನು ಪ್ರಾರ್ಥಿಸಿದ್ದನು.

ಈ ಕುರಿತು ಅಹ್ಮದಿಯಾ ಜಮಾಅತ್‌ನ ಸಂಸ್ಥಾಪಕರು ಹೇಳಿದರು: ಇಡೀ ಧರ್ಮವನ್ನು ನಾಶಪಡಿಸುವ ಬದಲು ನಾವು ಇಬ್ಬರಿದ್ದೇವೆ ಆದ್ದರಿಂದ ನಾವು ಪರಸ್ಪರ ವಿರುದ್ಧವಾಗಿ ಪ್ರಾರ್ಥಿಸೋಣ. ತದನಂತರ ಪ್ರಾರ್ಥನೆಗಳ ಸಮರವು ಪ್ರಾರಂಭವಾಯಿತು ಮತ್ತು ಸರ್ವಶಕ್ತನಾದ ಅಲ್ಲಾಹನು ಈ ಯುದ್ಧದಲ್ಲಿ ಜಯವು ನಿಮ್ಮದಾಗುತ್ತದೆ ಎಂದು ತಿಳಿಸಿದ್ದನು ಮತ್ತು ಅಂತಿಮವಾಗಿ ಅದು ಸಂಭವಿಸಿತು. ಆದ್ದರಿಂದ "ಫತ್‌ಹೇ ಅಝೀಮ್ (ಮಹಾ ವಿಜಯ)" ಎಂಬ ಈ ಹೆಸರನ್ನು ಸರ್ವಶಕ್ತನಾದ ಅಲ್ಲಾಹನು ನಮಗೆ ತಿಳಿಸಿದನು. ಆದ್ದರಿಂದ, ನಾವು ಈ ಮಸೀದಿಯನ್ನು ನಿರ್ಮಿಸಿದಾಗ, ಜಮಾಅತ್‌ನ ಸದಸ್ಯರು ಹೆಸರನ್ನು ಕೇಳಿದರು ಆದ್ದರಿಂದ ನಾನು ಕೆಲವು ಹೆಸರುಗಳನ್ನು ಸೂಚಿಸಿದೆ ಮತ್ತು ಅಮೆರಿಕನ್ನರು ಸುಲಭವಾಗಿ ಉಚ್ಚರಿಸಬಹುದಾದ ಹೆಸರನ್ನು ಆಯ್ಕೆ ಮಾಡಲು ಜಮಾಅತ್ತನ್ನು ಕೇಳಿದೆ, ಆದರೆ ಸ್ಥಳೀಯ ಜಮಾಅತ್‌ನ ಸದಸ್ಯರು "ಫತ್ಹೇ ಅಝೀಮ್" ಎಂಬ ಹೆಸರು ಸೂಕ್ತವಾಗಿದೆ ಎಂದು ಒತ್ತಾಯಿಸಿದರು. ನಂತರ ನಾನು ಅದನ್ನು ಅನುಮೋದಿಸಿದೆ, ಆದ್ದರಿಂದ ಈ ಮಸೀದಿಗೆ "ಫತ್ಹೇ ಅಝೀಮ್" ಎಂದು ಹೆಸರಿಸಲಾಯಿತು.

* **ಈ ಮುಬಾಹಿಲದ ಬಗ್ಗೆ ಅಮೆರಿಕದ ಜನರು ತಿಳಿದುಕೊಳ್ಳುವುದು ಏಕೆ ಮುಖ್ಯವಾಗಿದೆ ಎಂದು ಪತ್ರಕರ್ತರು ಕೇಳಿದರು.**

ಈ ಕುರಿತು ಹುಝೂರ್ ಅನ್ವರ್(ಅತಬಿಅ) ಅವರು, ಇದು ಅಮೆರಿಕದ ನಾಗರಿಕರಿಗೆ ಮಾತ್ರವಲ್ಲ, ಪ್ರತಿಯೊಬ್ಬರಿಗೂ ಮುಖ್ಯವಾಗಿದೆ. ಪ್ರತಿಯೊಬ್ಬ ಅಮೇರಿಕನ್ ಇತಿಹಾಸದಲ್ಲಿ ಆಸಕ್ತಿ ಹೊಂದಿರುವುದಿಲ್ಲ, ಆದರೆ ಕೆಲವರು ತಮ್ಮ ದೇಶದಲ್ಲಿ ವಾಸಿಸುವ ವಿಭಿನ್ನ ಜನರ ಇತಿಹಾಸ ಮತ್ತು ವಿಭಿನ್ನ ಧರ್ಮಗಳು ಮತ್ತು ಅವರ ಹಿನ್ನೆಲೆಗಳ ಬಗ್ಗೆ ಕಲಿಯಬೇಕು ಎಂದು ಯೋಚಿಸುವಷ್ಟು ಆಸಕ್ತಿ ಹೊಂದಿರುತ್ತಾರೆ. ಆದ್ದರಿಂದ ಆಸಕ್ತರು ಇಲ್ಲಿಗೆ ಬಂದು ನಮ್ಮ ಇತಿಹಾಸವನ್ನು ತಿಳಿದುಕೊಳ್ಳಬೇಕು ಮತ್ತು ಇದು ಯಾವುದೇ ಒಂದು ಧರ್ಮದ ವಿಜಯವಲ್ಲ ಬದಲಿಗೆ ಅಲ್ಲಾಹನ ನಿಜವಾದ ಸೇವಕ ಯಾರು ಮತ್ತು ಪರಸ್ಪರ ವಿರುದ್ಧವಾಗಿ ನಿಂದಿಸಬಾರದು ಎಂದು ತಿಳಿಸುವ ವಿಜಯವಾಗಿದೆ. ನಾವು ಎಲ್ಲಾ ಧರ್ಮಗಳನ್ನು ಗೌರವಿಸಬೇಕು. ಇದು ಪವಿತ್ರ ಖುರ್‌ಆನ್‌ನ ಬೋಧನೆಯಾಗಿದೆ ಮತ್ತು ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಸಂಸ್ಥಾಪಕರು ಹೇಳಿದರು: ನೀವು ಪರಸ್ಪರ ಗೌರವಿಸಬೇಕು ಮತ್ತು ಮಾನವ ಜನ್ಮದ ಮುಖ್ಯ ಉದ್ದೇಶವು ಅಲ್ಲಾಹನನ್ನು ಆರಾಧಿಸುವುದಾಗಿದೆ ಮತ್ತು ನೀವು ಯಾವುದೇ ಧರ್ಮದ ಅನುಯಾಯಿಯಾದರೂ ಸಹ ನೀವು ನಿಮ್ಮ ಈ ಮೂಲ ಉದ್ದೇಶದಂತೆ ವರ್ತಿಸಬೇಕು ಆದರೆ ದುರ್ಬಳಕೆ ಮಾಡಬಾರದು ಇತರ ಜನರ ವಿರುದ್ಧ ಕೆಟ್ಟ ಭಾಷೆ ಅಥವಾ ನಿಂದನೆ ಮಾಡಬಾರದು. ಹಾಗಾದರೆ ಈಗ ನಾವು ಈ ಇತಿಹಾಸವನ್ನು ಜನರ ಮುಂದೆ ವಿವರಿಸುತ್ತೇವೆ. ಇತಿಹಾಸ ಪ್ರಿಯರು ಮತ್ತು ಧರ್ಮಾಭಿಮಾನಿಗಳಿಗೆ ಇದು ಹೀಗೆಯೇ ಸಂಭವಿಸಿತು ಎಂದು ತಿಳಿಯುತ್ತದೆ.

* **ನಂತರ, ಪತ್ರಕರ್ತರ ಪ್ರಶ್ನೆಗೆ, ನಿಮ್ಮ ಪ್ರಕಾರ, ಜನರ ಮೇಲೆ ಈ ಮುಬಾಹಲದ ಪರಿಣಾಮಗಳೇನು?**

ಇಸ್ಲಾಂ ಧರ್ಮದ ಸಂದೇಶವನ್ನು ಸಾರುವುದು ನಮ್ಮ ಕೆಲಸ ಎಂದು ಹುಝೂರ್ ಅನ್ವರ್(ಅತಬಿಅ) ಹೇಳಿದರು ಮತ್ತು ಇಸ್ಲಾಮ್ ಧರ್ಮದಲ್ಲಿ ಯಾವುದೇ ಬಲವಂತವಿಲ್ಲ ಮತ್ತು ನೀವು ಯಾರನ್ನೂ ಅವರ ಧರ್ಮವನ್ನು ಬದಲಾಯಿಸಲು ಒತ್ತಾಯಿಸಲು ಸಾಧ್ಯವಿಲ್ಲ ಮತ್ತು ಇಸ್ಲಾಮ್ ಅನ್ನು ಸ್ವೀಕರಿಸದವರು ಕನಿಷ್ಠ ಅವರು ಅರ್ಥಮಾಡಿಕೊಳ್ಳುತ್ತಾರೆ ಎಂದು ಹೇಳಿದರು. ಇಸ್ಲಾಮ್ ಧರ್ಮವು ಒಟ್ಟಾಗಿ ಬದುಕಲು ಮತ್ತು ನಮ್ಮ ಕರ್ತವ್ಯಗಳನ್ನು ಪೂರೈಸಲು ಕೇಳುತ್ತದೆ. ಜನರನ್ನು ಅಲ್ಲಾಹನ ಬಳಿಗೆ ಕರೆದು ಅಲ್ಲಾಹನ ಬಳಿಗೆ ಕರೆತರುವುದು, ಅಲ್ಲಾಹನನ್ನು ಹೇಗೆ ಆರಾಧಿಸಬೇಕು ಮತ್ತು ಏಕೆ ಅಲ್ಲಾನನ್ನು ಆರಾಧಿಸಬೇಕು ಮತ್ತು ನಮ್ಮ ಸೃಷ್ಟಿಕರ್ತನ ಮುಂದೆ ಬಾಗುವುದು ಮತ್ತು ಈ ಉದ್ದೇಶವನ್ನು ವಿವರಿಸುವುದು ನನ್ನ ಬರುವಿಕೆಯ ಉದ್ದೇಶವಾಗಿದೆ ಎಂದು ಅಹ್ಮದಿಯಾ ಜಮಾಅತ್‌ನ ಸಂಸ್ಥಾಪಕರು ಹೇಳಿದರು. ಮತ್ತೊಂದು ಉದ್ದೇಶವೇನೆಂದರೆ ಜನರಲ್ಲಿ ಅವರ ಪರಸ್ಪರರ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದಾಗಿದೆ, ಮತ್ತು ಜನರು ಪರಸ್ಪರ ಗೌರವಿಸಬೇಕು. ಅವರು ಪರಸ್ಪರರ ಧರ್ಮವನ್ನು ಗೌರವಿಸಬೇಕು ಮತ್ತು ಇದನ್ನು ಪವಿತ್ರ ಖುರ್‌ಆನ್ ಕಲಿಸುತ್ತದೆ ಮತ್ತು ಇದನ್ನೇ ನಾವು ನಂಬುತ್ತೇವೆ ಮತ್ತು ಇದನ್ನೇ ನಾವು ಬೋಧಿಸುತ್ತೇವೆ. **(ಮುಂದುವರಿಯುವುದು)**

***ವಿಶೇಶ ಸೂಚನೆ***

"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 08 December 2022, Issue No. 49

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್<sup>(ಅತಬಿಅ)</sup>ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

**(ಬದರ್ ಸಂಚಿಕೆ 48ರ ಉಳಿದ ಭಾಗ)**

ಟಿವಿ ಪರದೆಯ ಮೇಲೆ 20 ಪತ್ರಿಕೆಗಳ ಕ್ಲಿಪ್ಪಿಂಗ್‌ಗಳಿವೆ, ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಡೂಯಿಗೆ ನೀಡಿದ ಪ್ರಾರ್ಥನ ಸಮರ (ಮುಬಾಹಲಾ), ಪಂಥಾಹ್ವಾನವನ್ನು ಉಲ್ಲೇಖಿಸಲಾಗಿದೆ. ಯಾವುದೇ ಬಟನ್‌ಗಳನ್ನು ಒತ್ತದೆ ಅಥವಾ ಟಿವಿ ಪರದೆಯನ್ನು ಸ್ಪರ್ಶಿಸದೆಯೇ ಈ ಕ್ಲಿಪ್‌ಗಳನ್ನು ಟಿವಿ ಪರದೆಯಲ್ಲಿ ಬದಲಾಯಿಸಲಾಗುತ್ತದೆ. ಟಿವಿ ಪರದೆಯ ಮುಂದೆ ನೀವು ಕೈ ಬೀಸಿದಾಗ, ಮುಂದಿನ ಕ್ಲಿಪ್ ಬರುತ್ತದೆ. ಈ ರೀತಿಯಾಗಿ, ಕೇವಲ ಕೈ ಸನ್ನೆಯೊಂದಿಗೆ, ನೀವು ನೋಡಲು ಬಯಸುವ ಯಾವುದೇ ಕ್ಲಿಪ್ ನಿಮ್ಮ ಮುಂದೆ ಕಾಣಿಸಿಕೊಳ್ಳುತ್ತದೆ.

ಟಿವಿ ಪರದೆಯ ಮೇಲೆ ಕೈ ಸನ್ನೆಗಳೊಂದಿಗೆ ಬದಲಾಯಿಸುವುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಉಲ್ಲೇಖಗಳು, ಅದು ಸರ್ವಶಕ್ತನಾದ ಅಲ್ಲಾಹನೊಂದಿಗಿನ ಸಂಬಂಧವನ್ನು ಕಲಿಸುತ್ತದೆ. ಒಂದು ಅಂಕಣದಲ್ಲಿ ನ್ಯೂಯಾರ್ಕ್ ಟೈಮ್ಸ್ ಪ್ರತಿಸ್ಪರ್ಧಿ ಪ್ರವಾದಿಗಳು ಎಂಬ ಲೇಖನವಿದೆ. ಇದರಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಡೂಯಿಗೆ ಬಲವಾದ ಮಾತುಗಳಲ್ಲಿ ಸವಾಲು ಹಾಕಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕೋಟ್ ಅನ್ನು ಪ್ರದರ್ಶಿಸುವ ಶೋಕೇಸ್‌ನಲ್ಲಿ, ಅದರ ಮೇಲಿನ ಗೋಡೆಯ ಮೇಲೆ "ರಾಜರು ನಿಮ್ಮ ಬಟ್ಟೆಗಳಿಂದ ಅನುಗ್ರಹವನ್ನು ಹುಡುಕುತ್ತಾರೆ" ಎಂದು ಬರೆಯಲಾಗಿದೆ.

ಹುಝೂರ್ ಅನ್ವರ್<sup>(ಅತಬಿಅ)</sup> ಅವರು ಪ್ರದರ್ಶನದ ಪರಿಶೀಲನೆಯ ಸಮಯದಲ್ಲಿ ಡೂಯಿಯ ಪ್ರಾಚೀನ ವಸ್ತುಗಳನ್ನು ನೋಡಿದರು ಮತ್ತು ಮೋಶೆಯ ಕಾಲದಲ್ಲಿ ಫಿರೌನ್ ಇದ್ದನು ಅವನ ಮಮ್ಮಿಯನ್ನು ಸಂರಕ್ಷಿಸಲಾಗಿದೆ. ಇಂದು (ಡೂಯಿಯ) ಈ ಕಲಾಕೃತಿಗಳನ್ನು ಸಂರಕ್ಷಿಸುವ ಮೂಲಕ, ನೀವು ಈ ಗುರುತನ್ನು ಸಂರಕ್ಷಿಸಿದ್ದೀರಿ ಎಂದು ಹೇಳಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ನಂತರ ಅಹ್ಮದೀಯ ಜಮಾಅತ್ ಅಹ್ಮದೀಯ ಖಿಲಾಫತ್ ಮೂಲಕ ನಿರಂತರವಾಗಿ ಅಭಿವೃದ್ಧಿ ಹೊಂದುತ್ತಿರುವ "ಖುದ್ರತೆ ಸಾನಿಯವನ್ನು" ಉಲ್ಲೇಖಿಸಿ ಪ್ರದರ್ಶನದ ಒಂದು ಭಾಗವನ್ನು ಸಿದ್ಧಪಡಿಸಲಾಗಿದೆ, ಮತ್ತೊಂದೆಡೆ, ಡೂಯಿ ಮತ್ತು ಅವನ ಜಮಾಅತ್ ಶಾಶ್ವತವಾಗಿ ಕೊನೆಗೊಂಡಿತು. ಖಲೀಫರ ಕೆಲವು ಪುಸ್ತಕಗಳನ್ನು ಶೋಕೇಸ್‌ನಲ್ಲಿ ಇರಿಸಲಾಗಿತ್ತು. ಈ ಪುಸ್ತಕಗಳನ್ನು ನೋಡಿದ ನಂತರ, ಹುಝೂರ್ ಅನ್ವರ್<sup>(ಅತಬಿಅ)</sup> ಅವರು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಮತ್ತು ಖಲೀಫತುಲ್ ಮಸೀಹ್ ಸಾಲಿಸ್(ರ) ಅವರ ಪುಸ್ತಕಗಳನ್ನು ಸೇರಿಸಲು ಹೇಳಿದರು.

ಹಳೆಯ ದಿನಪತ್ರಿಕೆಗಳ ತುಣುಕುಗಳನ್ನು ಚಂದ್ರ ಮತ್ತು ಸೂರ್ಯಗ್ರಹಣವನ್ನು ಉಲ್ಲೇಖಿಸಿ ಇರಿಸಲಾಗಿತ್ತು. 1895 ರ ಪತ್ರಿಕೆಯ ತುಣುಕುಗಳನ್ನು ನೋಡಿ, ಹುಝೂರ್ ಅನ್ವರ್<sup>(ಅತಬಿಅ)</sup> ಹೇಳಿದರು: 1895 ರಲ್ಲಿ ಪಶ್ಚಿಮಕ್ಕೆ ಮತ್ತು 1894 ರಲ್ಲಿ ಪೂರ್ವದ ಜನರಿಗೆ ಗ್ರಹಣವಿತ್ತು ಎಂದು ಹೇಳಿದರು.

ಪ್ರದರ್ಶನದ ಕೊನೆಯ ಭಾಗದಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ "ಗುಲಾಮ್ ಅಹ್ಮದ್ ಕೀ ಜೈ" ಎಂಬ ದರ್ಶನವನ್ನು ಪರದೆಯ ಮೇಲೆ ತೋರಿಸಲಾಯಿತು. ಮತ್ತು ಅನುಗ್ರಹಗಳನ್ನು ಬಹಿರಂಗಗೊಳಿಸಲಾಯಿತು. ಹುಝೂರ್ ಅನ್ವರ್<sup>(ಅತಬಿಅ)</sup> ಅದನ್ನು ನೋಡಿ, "ನನ್ನ ಕೈಯಲ್ಲಿಯೂ ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಎರಡು ಅನುಗ್ರಹಗಳಿವೆ." ಎಂದು ಹೇಳಿದರು. ಹುಝೂರ್ ಅನ್ವರ್<sup>(ಅತಬಿಅ)</sup> ಅವರು ತಮ್ಮ ಕೈಯಲ್ಲಿ ಧರಿಸಿದ್ದ ಎರಡು ಉಂಗುರಗಳು **ಅಲೈಸಲ್ಲಾಹು ಬಿಕಾಫಿನ್ ಅಬ್ದಹೂ** ಮತ್ತು **ಮೌಲಾ ಬಸ್** ನ ಕಡೆ ಸೂಚಿಸಿದರು.

ಈ ಪ್ರದರ್ಶನವನ್ನು ತೆಹ್ರೀಕ್-ಎ-ಜದೀದ್‌ನ ರಾಷ್ಟ್ರೀಯ ಕಾರ್ಯದರ್ಶಿ ಮಾನ್ಯ ಅನ್ವರ್ ಮೆಹಮೂದ್ ಖಾನ್ ಸಾಹಿಬ್ ಮತ್ತು ಅವರ ತಂಡವು ಬಹಳ ಪ್ರಯತ್ನದಿಂದ ಸಂಪೂರ್ಣವಾಗಿ ಆಯೋಜಿಸಿದೆ. ಅಂತಿಮವಾಗಿ, ಈ ತಂಡದ ಸದಸ್ಯರು ಹುಝೂರ್ ಅನ್ವರ್<sup>(ಅತಬಿಅ)</sup> ಅವರೊಂದಿಗೆ ಭಾವಚಿತ್ರಗಳನ್ನು ತೆಗೆದುಕೊಳ್ಳುವ ಸೌಭಾಗ್ಯ ಪಡೆದರು.

### ಫತ್ಹೇ ಅಝೀಮ್ ಮಸೀದಿಯ ಫಲಕ ಅನಾವರಣ ಮತ್ತು ಮೀನಾರ್‌ನ ಅಡಿಪಾಯ

ವಸ್ತುಪ್ರದರ್ಶನವನ್ನು ವೀಕ್ಷಿಸಿದ ನಂತರ ಹುಝೂರ್ ಅನ್ವರ್<sup>(ಅತಬಿಅ)</sup> ಅವರು ಮಸೀದಿಯ ಹೊರಗೋಡೆಯ ಫಲಕವನ್ನು ಅನಾವರಣಗೊಳಿಸಿ ಪ್ರಾರ್ಥಿಸಿದರು.

ತದನಂತರ ಹುಝೂರ್ ಅನ್ವರ್<sup>(ಅತಬಿಅ)</sup> ಅವರು ಮೀನಾರಕ್ಕೆ ಶಂಕುಸ್ಥಾಪನೆ ಮಾಡಿದರು. ಮಸೀದಿಯ ಪಕ್ಕದಲ್ಲಿ ಮಿನಾರತ್ ಅಲ್-ಮಸೀಹ್ ಶೈಲಿಯಲ್ಲಿ ಮಿನಾರ್ ಅನ್ನು ನಿರ್ಮಿಸಲು ನಗರ ಆಡಳಿತವು ಅನುಮೋದನೆ ನೀಡಿದೆ. ಈ ಮಿನಾರ್‌ನ ಎತ್ತರ 70 ಅಡಿ ಇರುತ್ತದೆ.

ಫತ್ಹೇ ಅಝೀಮ್ ಮಸೀದಿ ಮತ್ತು ಅದರ ಪಕ್ಕದ ಸಭಾಂಗಣಗಳು ಮತ್ತು ಕಚೇರಿಗಳನ್ನು ನಕ್ಷೆಯ ರೂಪದಲ್ಲಿ ಫಲಕದಲ್ಲಿ ಪ್ರದರ್ಶಿಸಲಾಯಿತು. ಹುಝೂರ್ ಅನ್ವರ್<sup>(ಅತಬಿಅ)</sup> ಈ ನಕ್ಷೆಗಳನ್ನು ವೀಕ್ಷಿಸಿದರು. ಮಾನ್ಯ ಫಲಾಹುದ್ದೀನ್ ಶಾಮ್ಸ್ ಸಾಹಿಬ್ ನಾಯಿಬ್ ಅಮೀರ್ USA ಅವರು ಈ ಯೋಜನೆಯನ್ನು ಉಲ್ಲೇಖಿಸಿ ಹುಝೂರ್ ಅನ್ವರ್<sup>(ಅತಬಿಅ)</sup> ಅವರ ಸೇವೆಯಲ್ಲಿ ವಿವಿಧ ಸಮಸ್ಯೆಗಳನ್ನು ಪ್ರಸ್ತುತಪಡಿಸಿದರು ಮತ್ತು ನಮ್ಮ ಜಮೀನಿನ ಒಟ್ಟು ವಿಸ್ತೀರ್ಣ 10 ಎಕರೆ, ಅದರಲ್ಲಿ ಪ್ರಸ್ತುತ ಎರಡೂವರೆ ಎಕರೆ ಬಳಕೆಯಲ್ಲಿದೆ. ಎರಡೂವರೆ ಎಕರೆ ಪ್ರದೇಶದಲ್ಲಿ ಮಸೀದಿ, ಕಚೇರಿಗಳನ್ನು ನಿರ್ಮಿಸಲಾಗುತ್ತಿದೆ, ಅತಿಥಿ ಗೃಹವನ್ನು ನಿರ್ಮಿಸಲಾಗುತ್ತಿದೆ, ದೊಡ್ಡ ಪಾರ್ಕಿಂಗ್ ಪ್ರದೇಶವನ್ನು ನಿರ್ಮಿಸಲಾಗಿದೆ ಮತ್ತು ವಿವಿಧ ಸ್ಥಳಗಳಲ್ಲಿ ಮಾರ್ಕೀಗಳನ್ನು ಸಹ ಸ್ಥಾಪಿಸಲಾಗಿದೆ.

ಇನ್ನುಳಿದ ಏಳೂವರೆ ಎಕರೆ ಜಮೀನು ಈ ನಕ್ಷೆಯ ಪ್ರಕಾರ ಯಾವ ಕಡೆ ಇದೆ ಎಂದು ಹುಝೂರ್ ಅನ್ವರ್<sup>(ಅತಬಿಅ)</sup> ವಿಚಾರಿಸಿದರು. ಆ ಭಾಗವನ್ನು ಅವರಿಗೆ ತೋರಿಸಿ ಈ ಕಡೆ ಇದೆ, ಈ ಭಾಗದಲ್ಲಿ ಮರಗಳಿವೆ ಎಂದು ತಿಳಿಸಿದರು. ಹುಝೂರ್ ಅನ್ವರ್<sup>(ಅತಬಿಅ)</sup> ಅವರು ಪಾರ್ಕಿಂಗ್ ಪ್ರದೇಶದ ಬಗ್ಗೆ ವಿಚಾರಿಸಿದರು ಆಗ ಮಸೀದಿಯ ಪಾರ್ಕಿಂಗ್ ಪ್ರದೇಶದಲ್ಲಿ 95 ವಾಹನಗಳು ಬರಬಹುದು ಎಂದು ತಿಳಿಸಲಾಯಿತು.

ಬಳಿಕ ಹುಝೂರ್ ಅನ್ವರ್<sup>(ಅತಬಿಅ)</sup> ಅವರು ಮಸೀದಿಯ ಪಕ್ಕದಲ್ಲಿರುವ ಸಭಾಂಗಣ ಹಾಗೂ ಕಚೇರಿಗಳನ್ನು ಪರಿಶೀಲಿಸಿದರು. ಪ್ರದರ್ಶನ ಸಭಾಂಗಣವನ್ನು ಹೊರತುಪಡಿಸಿ ಗ್ರಂಥಾಲಯವಿದೆ. ಕಚೇರಿಗಳಲ್ಲಿ ಜಮಾಅತ್‌ನ ಅಧ್ಯಕ್ಷರ ಕಚೇರಿ ಮತ್ತು ಲಜ್ನಾ ಕಚೇರಿಗಳು ಸೇರಿವೆ. ಮಕ್ಕಳ ತರಗತಿಗೆ ಕೊಠಡಿಯನ್ನು ಸಹ ಒದಗಿಸಲಾಗಿದೆ. ಆಡಿಯೋ ವಿಡಿಯೋ ಕೊಠಡಿಯೂ ಇದ್ದು, ಲಾಂಡ್ರಿ ಕೊಠಡಿಯನ್ನೂ ನಿರ್ಮಿಸಲಾಗಿದೆ. ಲಿಫ್ಟ್ ಸೌಲಭ್ಯವನ್ನೂ ಕಲ್ಪಿಸಲಾಗಿದೆ. ಎರಡು ಶೇಖರಣಾ ಕೊಠಡಿಗಳೂ ಇವೆ.

*(ಪುಟ ಸಂಖ್ಯೆ 11 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.